# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:03 • ಸಂಚಿಕೆ: 12 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 04.07.2025 • ಶುಕ್ರವಾರ • ಪುಟ:04 • ಬೆಲೆ:2
Volume:03 • Issue: 12 • PRGI No:KARKAN/2023/88055 • VIJAYANAGARA • 04.07.2025 • Friday • Page:04 • Rs:2



Grow with Us, Advertise in Hampi Times
Print & Digital Media



"Looking to bring your sales and services to readers Fingertips? HAMPI TIMES is the ideal platform"

Call:9448633038/email:hampitimes@gmail.com


## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 03–07–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1625.53 ಅಡಿ |
| ಒಳ ಹರಿವು | 28500 ಕ್ಯೂಸೆಕ್ |
| ಹೊರ ಹರಿವು | 13748 ಕ್ಯೂಸೆಕ್ |
| ಇಂದಿನ ಸಾಮರ್ಥ್ಯ | 78.239 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1587.11 ಅಡಿ |
| ಒಳ ಹರಿವು | 10503 ಕ್ಯೂಸೆಕ್ |
| ಹೊರ ಹರಿವು | 296 ಕ್ಯೂಸೆಕ್ |
| ಸಾಮರ್ಥ್ಯ | 8.782 ಟಿಎಂಸಿ |


ನಿವೇಶನ ಮಾರಾಟಕ್ಕಿದೆ
N.A. Plot for Sale

ಹೊಸಪೇಟೆ ತಾಲೂಕಿನ ಡಣಾಯಕನಕರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಂದಿಬಂಡಿ ಗ್ರಾಮದಲ್ಲಿ 3746 ಚ.ಡಿ ವಿಸ್ತೀರ್ಣದ ಖಾಲಿ ಎನ್.ಎ. ನಿವೇಶನ ಮಾರಾಟಕ್ಕಿದೆ.
(ನಿವೇಶನಕ್ಕೆ ಪೂರ್ವ ಮತ್ತು ಪಶ್ಚಿಮಕ್ಕೆ ರಸ್ತೆ ಇದೆ)
ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
M: 79 72 56 70 22



ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com


# ಟಿಬಿಡ್ಯಾಂ 20 ಕ್ರಸ್ಟ್‌ಗೇಟ್ ಓಪನ್

## 62 ಸಾವಿರ ಕ್ಯುಸೆಕ್ ನೀರು ಹೊರಕ್ಕೆ | 28.932 ಕ್ಯುಸೆಕ್ ಒಳಹರಿವು



■ **ಹಂಪಿ ಟೈಮ್ಸ್ ಹೊಸಪೇಟೆ**

ತುಂಗಭದ್ರಾ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಬೆಳಿಗ್ಗೆ 8ಕ್ಕೆ 13748 ಕ್ಯುಸೆಕ್ ಒಳಹರಿವಿದ್ದು, ನಂತರ 28.932 ಕ್ಯುಸೆಕ್ ಹೆಚ್ಚಳಗೊಂಡಿದ್ದರಿಂದ ತುಂಗಭದ್ರಾ ಮಂಡಳಿ ಅಧಿಕಾರಿಗಳು ಬೆಳಿಗ್ಗೆ 11ಕ್ಕೆ 12 ಗೇಟ್‌ಳನ್ನ ಓಪನ್ ಮಾಡಿದ್ದರು. ನಂತರ ಡ್ಯಾಂನ 20 ಕ್ರಸ್ಟ್‌ಗೇಟ್‌ಗಳನ್ನು 2.5 ಅಡಿ ಎತ್ತರಿಸಿ ಪ್ರತಿ ಗೇಟಿನಿಂದ 2.913 ಕ್ಯುಸೆಕ್ ಹಾಗೂ ಕಾಲುವೆಗೆ ಸೇರಿ ಒಟ್ಟು 62.766 ಕ್ಯುಸೆಕ್ ನೀರು ನದಿಗೆ ಬಿಟ್ಟಿದ್ದಾರೆ.

ತುಂಗಭದ್ರಾ ಜಲಾಶಯದ ನೀರಿನ ಸಾಮರ್ಥ್ಯ 1633 ಅಡಿ ಇದ್ದು, 105.788 ಟಿಎಂಸಿ ಸಂಗ್ರಹ ಸಾಮರ್ಥ್ಯವಿದ್ದರೂ, ಕ್ರಸ್ಟ್‌ಗೇಟ್‌ಗಳು ನೀರಿನ ರಭಸವನ್ನು ತಡೆದುಕೊಳ್ಳುವ ಸಾಮರ್ಥ್ಯವಿಲ್ಲವೆಂಬ ತಜ್ಞರ ಸಲಹೆಯನ್ನಾಧರಿಸಿ, ಡ್ಯಾಂನಲ್ಲಿ 78.206 ಟಿಎಂಸಿ ನೀರು ಸಂಗ್ರಹಗೊಂಡ ಬೆನ್ನಲ್ಲೆ ಇದೇ ಮೊದಲ ಬಾರಿಗೆ ನಿರೀಕ್ಷಿತ ಅವಧಿಗಿಂತ ಮುಂಚೆಯೆ ನದಿಗೆ ನೀರು ಹರಿಸಲಾಗುತ್ತಿದೆ. ತುಂಗಭದ್ರಾ ಜಲಾಶಯ ಬೇಗನೇ ಭರ್ತಿಯಾಗುತ್ತಿರುವುದು ಈ ಭಾರಿ ಅಧಿಕಾರಿಗಳು ಹಾಗೂ ರೈತರಲ್ಲಿ ಆತಂಕ ಸೃಷ್ಟಿಸಿದೆ. ನೀರಿನ ಒಳಹರಿವು ಹೆಚ್ಚಿದರೆ ಹೆಚ್ಚುವರಿ ನೀರನ್ನು ನದಿಗೆ ಬಿಡಲಾಗುತ್ತದೆ. ನದಿಪಾತ್ರದ ಜನರು ಎಚ್ಚರಿಕೆಯಿಂದಿರಬೇಕು ಎಂದು ತುಂಗಭದ್ರಾ ಮಂಡಳಿ ಸೂಚಿಸಿದೆ.

# ಇಂದು ವಿಜಯನಗರಕ್ಕೆ ಸಚಿವ ಸಂತೋಷ ಲಾಡ್

■ **ಹಂಪಿ ಟೈಮ್ಸ್ ಹೊಸಪೇಟೆ**



ನಗರದಲ್ಲಿನ ಹೊಟೇಲ್ ಮಲ್ಲಿಗೆಯಲ್ಲಿ ಜು.4 ರಂದು ಬೆಳಿಗ್ಗೆ 10.30ಕ್ಕೆ ವಿಜಯನಗರ ಜಿಲ್ಲೆಯ ವಿವಿಧ ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಮತ್ತು ವಿವಿಧ ಯೋಜನೆಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಕಾರ್ಮಿಕ ಸಚಿವ ಸಂತೋಷ್ ಎಸ್.ಲಾಡ್ ಉದ್ಘಾಟಿಸಲಿದ್ದಾರೆ. ಮಧ್ಯಾಹ್ನ 2 ಗಂಟೆಯಿಂದ 6 ಗಂಟೆಯವರೆಗೆ ಹೊಟೇಲ್ ಪ್ರಿಯದರ್ಶಿನಿ ಪ್ರೈಡ್‌ನಲ್ಲಿ ಜಿಲ್ಲೆಯ ಜನಪ್ರತಿನಿಧಿಗಳು ಮತ್ತು ಮುಖಂಡರೊಂದಿಗೆ ಸಂವಾದ ನಡೆಸಲಿದ್ದಾರೆ ಎಂದು ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿ ಪಿ.ಕುಮಾರ್ ತಿಳಿಸಿದ್ದಾರೆ.

# ಜು.5 ರಿಂದ 12 ರವರೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆ–3 ನಿಷೇಧಾಜ್ಞೆ ಜಾರಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಎಸ್ಸೆಸ್ಸೆಲ್ಸಿ ಪರೀಕ್ಷೆ–3 ಜಿಲ್ಲೆಯಾದ್ಯಂತ ಜು.5 ರಿಂದ 12 ರವರೆಗೆ ಒಟ್ಟು 11 ಪರೀಕ್ಷಾ ಕೇಂದ್ರಗಳಲ್ಲಿ ಸುಗಮ ಮತ್ತು ಪಾರದರ್ಶಕವಾಗಿ ಜರುಗಲಿವೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

ನಿಗಧಿಪಡಿಸಿರುವ ಪರೀಕ್ಷಾ ಕೇಂದ್ರಗಳ ಸುತ್ತಲೂ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಹಾಗೂ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಮತ್ತು ಪರೀಕ್ಷೆಗಳಲ್ಲಿ ನಡೆಯಬಹುದಾದ ಅವ್ಯವಹಾರಗಳನ್ನು ತಡೆಗಟ್ಟುವ ಸಂಬಂಧ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಆದೇಶಿಸಿದೆ. ಜೆರಾಕ್ಸ್, ಕಂಪ್ಯೂಟರ್, ಸೈಬರ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸದಂತ ನಿರ್ಬಂಧಿಸಿ ಆದೇಶಿಸಲಾಗಿದೆ. ಪರೀಕ್ಷಾ ಕೇಂದ್ರ ಹಾಗೂ ಆವರಣದಲ್ಲಿ ಕಡ್ಡಾಯವಾಗಿ ಮೊಬೈಲ್ ನಿಷೇಧಿಸಲಾಗಿದೆ ಎಂದು ತಿಳಿಸಿದ್ದಾರೆ.

# ವಸತಿ ಇಲಾಖೆಯಲ್ಲಿ ಭ್ರಷ್ಟಾಚಾರ ಆರೋಪ ಸಚಿವ ಜಮೀರ್ ಖಾನ್ ವಜಾಗೆ ಜೆಡಿಎಸ್ ಆಗ್ರಹ

## ಜಿಲ್ಲಾ ಜನತಾದಳ ಅಧ್ಯಕ್ಷ ಕೆ. ಕೊಟ್ರೇಶ್ ಡಿಸಿ ಮೂಲಕ ರಾಜ್ಯಪಾಲರಿಗೆ ಮನವಿ



■ **ಹಂಪಿ ಟೈಮ್ಸ್ ಹೊಸಪೇಟೆ**

ವಸತಿ ಯೋಜನೆಗಳಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆರೋಪಿಸಿ, ವಸತಿ ಸಚಿವ ಬಿ.ಝಡ್. ಜಮೀರ್ ಅಹ್ಮದ್ ಖಾನ್ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕೆಂದು ವಿಜಯನಗರ ಜಿಲ್ಲಾ ಜನತಾದಳ (ಜಾತ್ಯಾತೀತ) ಜಿಲ್ಲಾಧ್ಯಕ್ಷ ಕೆ. ಕೊಟ್ರೇಶ್ ಅವರು ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ಮೂಲಕ ರಾಜ್ಯಪಾಲರಿಗೆ ಗುರುವಾರ ಮನವಿ ಸಲ್ಲಿಸಿದರು.

**ಕಾಂಗ್ರೆಸ್ ಸರ್ಕಾರದ ವಿರುದ್ಧ ಜೆಡಿಎಸ್ ಆಕ್ರೋಶ**

ಕಳೆದ ಎರಡು ವರ್ಷಗಳಿಂದ ಕಾಂಗ್ರೆಸ್ ಸರ್ಕಾರ ಉತ್ತಮ ಮತ್ತು ಕ್ರಿಯಾಶೀಲ ಆಡಳಿತ ನೀಡುವಲ್ಲಿ ವಿಫಲವಾಗಿದೆ ಎಂದು ಜೆಡಿಎಸ್ ಆರೋಪಿಸಿದೆ. ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಲಂಚಗುಳಿತನ, ಭ್ರಷ್ಟಾಚಾರ ಹೆಚ್ಚಾಗಿದ್ದು, ಸ್ವಜನ ಪಕ್ಷಪಾತ ತುಂಬಿ ತುಳುಕುತ್ತಿದೆ ಎಂದು ಜೆಡಿಎಸ್ ಮುಖಂಡರು ದೂರಿದರು. ಈ ಬಗ್ಗೆ ರಾಜ್ಯ ಕಾಂಗ್ರೆಸ್ ಪಕ್ಷದ ಹಿರಿಯ ಶಾಸಕರು ಮತ್ತು ಮುಖಂಡರುಗಳೇ ಸಾಕ್ಷಿ ಸಮೇತ ಮಾಧ್ಯಮಗಳಲ್ಲಿ ಆರೋಪಿಸಿರುವುದನ್ನು ಜೆಡಿಎಸ್ ಉಲ್ಲೇಖಿಸಿದೆ.

ಸರ್ಕಾರವು ರಸ್ತೆ, ಸೇತುವೆ, ಕೆರೆ–ಕಟ್ಟೆಗಳ ಪುನಶ್ಚೇತನ, ಒಳಚರಂಡಿ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಗುತ್ತಿಗೆದಾರರ ಬಾಕಿ ಹಣ ಪಾವತಿಸುವಲ್ಲಿ ವಿಳಂಬ ಮಾಡುತ್ತಿದ್ದು, ಇದು ಬಡವರ ಮತ್ತು ರೈತ ವಿರೋಧಿ ಸರ್ಕಾರವಾಗಿದೆ ಎಂದು ಟೀಕಿಸಿದರು. ಪರಿಶಿಷ್ಟರಿಗೆ ಮೀಸಲಾಗಿರುವ ಹಣದಲ್ಲಿ ತಾರತಮ್ಯ ಎಸಗಿ ಅನ್ಯಾಯ ಮಾಡುತ್ತಿದ್ದು, ಕೇವಲ ತುಷ್ಟೀಕರಣ ರಾಜಕಾರಣ ಮಾಡುತ್ತಿದೆ ಎಂದು ಜೆಡಿಎಸ್ ಮುಖಂಡರು ಆಪಾದಿಸಿದರು.

**ಕ್ರಿಕೆಟ್ ಗಲಭೆ ಮತ್ತು ವಸತಿ ಹಂಚಿಕೆಯಲ್ಲಿ ಭ್ರಷ್ಟಾಚಾರ ಆರೋಪ**

ಬೆಂಗಳೂರಿನಲ್ಲಿ ನಡೆದ ಆರ್.ಸಿ.ಬಿ. ಕ್ರಿಕೆಟ್ ತಂಡದ ವಿಜಯೋತ್ಸವ ಆಚರಣೆ ಸಂದರ್ಭದಲ್ಲಿ ನಡೆದ ಗಲಭೆ ಮತ್ತು ಕಾಲ್ತುಳಿತದಲ್ಲಿ ಅಮಾಯಕರ ಸಾವುಗಳಿಗೆ ರಾಜ್ಯ ಸರ್ಕಾರವೇ ಪ್ರಮುಖ ಕಾರಣ ಎಂದು ಜೆಡಿಎಸ್ ಉಲ್ಲೇಖಿಸಿದೆ. ಇದಲ್ಲದೆ, ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ಫಲಾನುಭವಿಗಳಿಗೆ ಮನೆಗಳ ಹಂಚಿಕೆಯಲ್ಲಿ ವ್ಯಾಪಕವಾದ ಭ್ರಷ್ಟಾಚಾರ ನಡೆದಿದೆ ಎಂದು ಕಾಂಗ್ರೆಸ್ ಪಕ್ಷದ ಹಿರಿಯ ಶಾಸಕರೇ ವಸತಿ ಸಚಿವ ಜಮೀರ್ ಅಹ್ಮದ್ ವಿರುದ್ಧ ನೇರವಾಗಿ ಆರೋಪಿಸಿರುವುದಾಗಿ ಜೆಡಿಎಸ್ ಹೇಳಿದೆ.

ಕಾಂಗ್ರೆಸ್ ಪಕ್ಷದ ಹಿರಿಯ ಶಾಸಕರು, ರಾಜ್ಯ ಸರ್ಕಾರ ಕಳೆದ 2 ವರ್ಷಗಳಿಂದ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದೆ ಜನರನ್ನು ವಂಚಿಸುತ್ತಿದೆ ಎಂದು ಆರೋಪಿಸಿದ್ದಾರೆ. ಅತೀವ ಭ್ರಷ್ಟಾಚಾರ ಮತ್ತು ಆಡಳಿತ ವೈಫಲ್ಯದಲ್ಲಿ ತೊಡಗಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ಸಂವಿಧಾನಬದ್ಧವಾಗಿ ಆಡಳಿತ ನಡೆಸಲು ವಿಫಲವಾಗಿರುವುದರಿಂದ, ರಾಜ್ಯ ಸರ್ಕಾರದ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಮನವಿ ಪತ್ರದಲ್ಲಿ ಆಗ್ರಹಿಸಲಾಗಿದೆ.

ಹೊಸಪೇಟೆ ತಾಲ್ಲೂಕು ಅಧ್ಯಕ್ಷ ಬಿ.ಎಂ. ಸೋಮಶೇಖರ್, ಹ.ಬೊ.ಹಳ್ಳಿ ತಾಲ್ಲೂಕು ಅಧ್ಯಕ್ಷ ವೈ. ಮಲ್ಲಿಕಾರ್ಜುನ, ಕೊಟ್ಟೂರು ತಾಲ್ಲೂಕು ಅಧ್ಯಕ್ಷ ಎ. ಸೋಮಶೇಖರ್, ಹಡಗಲಿ ಹಾಗೂ ಜಿಲ್ಲಾ ಜನತಾದಳದ ಮುಖಂಡರು ಉಪಸ್ಥಿತರಿದ್ದರು.

# ಜು.4 ರಂದು ಹೊಸಪೇಟೆಗೆ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಎಸ್.ಆರ್.ಮೆಹರೋಜ್ ಖಾನ್ ಆಗಮನ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ವಿವಿಧ ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಮತ್ತು ವಿವಿಧ ಯೋಜನೆಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಎಸ್.ಆರ್.ಮೆಹರೋಜ್ ಖಾನ್ ಅವರು ಹೊಸಪೇಟೆಗೆ ಜು.4 ರಂದು ಆಗಮಿಸಲಿದ್ದಾರೆ.

ಬೆಂಗಳೂರುನಿಂದ ರಸ್ತೆಯ ಮೂಲಕ ಆಗಮಿಸಿ ಬೆ.10:30 ಕ್ಕೆ ಹೊಸಪೇಟೆ ನಗರದಲ್ಲಿನ ಹೊಟೇಲ್ ಮಲ್ಲಿಗೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 2 ಗಂಟೆಯಿಂದ 6 ಗಂಟೆಯವರೆಗೆ ಹೊಟೇಲ್ ಪ್ರಿಯದರ್ಶಿನಿ ಪ್ರೈಡ್‌ನಲ್ಲಿ ಜಿಲ್ಲೆಯ ಜನಪ್ರತಿನಿಧಿಗಳು ಮತ್ತು ಮುಖಂಡರೊಂದಿಗೆ ಸಂವಾದ ನಡೆಸಲಿದ್ದಾರೆ. ಹೊಸಪೇಟೆಯಲ್ಲಿ ವಾಸ್ತವ್ಯ ಹೂಡಲಿದ್ದು, ಜು.5 ರಂದು ಬಳ್ಳಾರಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿ ಚಂದ್ರಶೇಖರ್.ಸಿ ಅವರು ಪ್ರವಾಸ ಕಾರ್ಯಕ್ರಮದಲ್ಲಿ ತಿಳಿಸಿದ್ದಾರೆ.

## SSLC ಹಂಪಿ ಟೈಮ್ಸ್ ಮಾರ್ಗದರ್ಶಿ — ಈ ಬಾರಿ ಫಲಿತಾಂಶ ನಮ್ಮದೆ

ಟಾಪರ್ ಆಗಲು ಇಂದಿನಿಂದಲೇ ಅಭ್ಯಾಸದಲ್ಲಿ ತೊಡಗಿಸಿಕೊಳ್ಳಿ

ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ

www.hampitimes.com / https://epaper.hampitimes.com

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ

Hampi Times Margadarshi 2025-26

### ಅಧ್ಯಾಯ 1 : ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣಗಳು

**1. ರಾಸಾಯನಿಕ ಕ್ರಿಯೆ ನಡೆದಿದೆ ಎಂದು ನಿರ್ಧರಿಸುವ ಅಂಶಗಳು ಯಾವುವು ?**

ಉತ್ತರ :
* ತಾಪದಲ್ಲಿ ಬದಲಾವಣೆ
* ಅನಿಲ ಬಿಡುಗಡೆ
* ಬಣ್ಣ ಬದಲಾವಣೆ
* ಪ್ರಕ್ಷೇಪ ಉಂಟಾಗುವುದು
* ಸ್ಥಿತಿ ಬದಲಾವಣೆ

**2. ಸಂಯೋಗ ಕ್ರಿಯೆ ಎಂದರೇನು ? ಸಂಯೋಗ ಕ್ರಿಯೆಗೆ ಉದಾ. ಬರೆಯಿರಿ.**

ಉತ್ತರ : ಎರಡು ಅಥವಾ ಹೆಚ್ಚು ಪ್ರತಿವರ್ತಕಗಳು ಸೇರಿ ಒಂದೇ ಉತ್ಪನ್ನ ಉಂಟುಮಾಡುವ ಕ್ರಿಯೆಗಳನ್ನು ಸಂಯೋಗ ಕ್ರಿಯೆ ಎನ್ನುವರು.

ಉದಾ– $C + O_2 \rightarrow CO_2$

**3. ಬಹಿರುಷ್ಣಕ ಕ್ರಿಯೆಗಳು ಮತ್ತು ಅಂತರುಷ್ಣಕ ಕ್ರಿಯೆಗಳ ನಡುವಿನ ವ್ಯತ್ಯಾಸ ಬರೆಯಿರಿ.**

| ಬಹಿರುಷ್ಣಕ ಕ್ರಿಯೆಗಳು | ಅಂತರುಷ್ಣಕ ಕ್ರಿಯೆಗಳು |
|---|---|
| ಉತ್ಪನ್ನಗಳೊಂದಿಗೆ ಉಷ್ಣ / ಶಕ್ತಿ ಬಿಡುಗಡೆಯಾಗುವ ಕ್ರಿಯೆಗಳನ್ನು ಬಹಿರುಷ್ಣಕ ಕ್ರಿಯೆಗಳು ಎನ್ನುವರು. ಉದಾ :– $CaO + H_2O \rightarrow Ca(OH)_2 +$ ಉಷ್ಣ | ಉತ್ಪನ್ನಗಳೊಂದಿಗೆ ಉಷ್ಣ / ಶಕ್ತಿ ಹೀರಿಕೆಯಾಗುವ ಕ್ರಿಯೆಗಳನ್ನು ಅಂತರುಷ್ಣಕ ಕ್ರಿಯೆಗಳು ಎನ್ನುವರು. ಉದಾ :– $CaCO_3 \xrightarrow{\text{ಉಷ್ಣ}} CaO + CO_2$ |

**4. ವಿಭಜನ ಕ್ರಿಯೆ ಎಂದರೇನು ? ವಿಭಜನ ಕ್ರಿಯೆ ಗೆ ಉದಾ. ಬರೆಯಿರಿ.**

ಉತ್ತರ : ಒಂದು ಪ್ರತಿವರ್ತಕವು ಸರಳ ಉತ್ಪನ್ನಗಳಾಗಿ ವಿಭಜನೆಯಾಗುವ ಕ್ರಿಯೆಯನ್ನು ವಿಭಜನ ಕ್ರಿಯೆ ಎನ್ನುವರು.

ಉದಾ– 1. $2FeSO_4 \rightarrow Fe_2O_3 + SO_2 + SO_3$
ಫೆರಸ್ ಸಲ್ಫೇಟ್ ಫೆರಿಕ್ ಆಕ್ಸೈಡ್

2. $2Pb(NO_3)_2 \rightarrow 2PbO + 4NO_2 + O_2$
ಸೀಸದ ನೈಟ್ರೇಟ್ (ಕಂದು ಬಣ್ಣದ ಧೂಮ)

**5. ವಿಭಜನ ಕ್ರಿಯೆಯ ವಿಧಗಳನ್ನು ಉದಾಹರಣೆಯೊಂದಿಗೆ ವಿವರಿಸಿ ?**

1. ಉಷ್ಣ ವಿಭಜನ ಕ್ರಿಯೆ : ವಿಭಜನ ಕ್ರಿಯೆಯು ಉಷ್ಣದ ಸಹಾಯದಿಂದ ನಡೆದರೆ ಅದನ್ನು ಉಷ್ಣ ವಿಭಜನ ಕ್ರಿಯೆ ಎನ್ನುವರು.

ಉದಾ– $CaCO_3 \xrightarrow{\text{ಉಷ್ಣ}} CaO + CO_2$

2. ದ್ಯುತಿ ವಿಭಜನ ಕ್ರಿಯೆ : ವಿಭಜನ ಕ್ರಿಯೆಯು ಸೂರ್ಯನ ಬೆಳಕಿನಲ್ಲಿ ನಡೆದರೆ ಅದನ್ನು ದ್ಯುತಿ ವಿಭಜನ ಕ್ರಿಯೆ ಎನ್ನುವರು.

ಉದಾ– $2AgBr \xrightarrow{\text{ಸೂರ್ಯನ ಬೆಳಕು}} 2Ag + Br_2$
(ಈ ಕ್ರಿಯೆಯನ್ನು ಕಪ್ಪು ಬಿಳುಪು ಛಾಯಾಗ್ರಹಣದಲ್ಲಿ ಬಳಸುತ್ತಾರೆ)

3. ವಿದ್ಯುತ್ ವಿಭಜನ ಕ್ರಿಯೆ : ವಿಭಜನ ಕ್ರಿಯೆಯು ವಿದ್ಯುತ್ ಶಕ್ತಿಯಿಂದ ನಡೆದರೆ ಅದನ್ನು ವಿದ್ಯುತ್ ವಿಭಜನ ಕ್ರಿಯೆ ಎನ್ನುವರು.

ಉದಾ– $2H_2O \xrightarrow{\text{ವಿದ್ಯುತ್ ಶಕ್ತಿ}} 2H_2 + O_2$

**6. ಸ್ಥಾನಪಲ್ಲಟ ಕ್ರಿಯೆ ಎಂದರೇನು ? ಸ್ಥಾನಪಲ್ಲಟ ಕ್ರಿಯೆಗೆ ಉದಾ. ಬರೆಯಿರಿ.**

ಉತ್ತರ : ಹೆಚ್ಚು ಕ್ರಿಯಾಪಟು ಧಾತುವು ಸಂಯುಕ್ತದಲ್ಲಿನ ಕಡಿಮೆ ಕ್ರಿಯಾಪಟು ಧಾತುವನ್ನು ಪಲ್ಲಟಗೊಳಿಸುವ ಕ್ರಿಯೆಗೆ ಸ್ಥಾನಪಲ್ಲಟ ಕ್ರಿಯೆ ಎನ್ನುವರು.

ಉದಾ– $Fe(s) + CuSO_4(aq) \rightarrow FeSO_4(aq) + Cu(s)$
(ತಾಮ್ರದ ಸಲ್ಫೇಟ್) (ಕಬ್ಬಿಣದ ಸಲ್ಫೇಟ್)

**7. ದ್ವಿಸ್ಥಾನಪಲ್ಲಟ ಕ್ರಿಯೆ ಎಂದರೇನು ? ದ್ವಿಸ್ಥಾನಪಲ್ಲಟ ಕ್ರಿಯೆಗೆ ಉದಾ. ಬರೆಯಿರಿ.**

ಉತ್ತರ : ಪ್ರತಿವರ್ತಕಗಳು ಪರಸ್ಪರ ಅಯಾನುಗಳನ್ನು ವಿನಿಮಯ ಮಾಡಿಕೊಳ್ಳುವ ಕ್ರಿಯೆಗೆ ದ್ವಿಸ್ಥಾನಪಲ್ಲಟ ಕ್ರಿಯೆ ಎನ್ನುವರು.

ಉದಾ– $BaCl_2(aq) + Na_2SO_4(aq) \rightarrow BaSO_4(s) + 2NaCl(aq)$
(ಬಿಳಿಯ ಪ್ರಕ್ಷೇಪ)

**8. ಪ್ರಕ್ಷೇಪನ ಕ್ರಿಯೆಎಂದರೇನು ? ಪ್ರಕ್ಷೇಪನ ಕ್ರಿಯೆಗೆ ಉದಾ. ಬರೆಯಿರಿ.**

ಉತ್ತರ : ಜಲವಿಲೀನಗೊಳ್ಳದ ಬಿಳಿಯ ಪ್ರಕ್ಷೇಪವನ್ನು ಉತ್ಪತ್ತಿ ಮಾಡುವ ಕ್ರಿಯೆಗೆ ಪ್ರಕ್ಷೇಪನ ಕ್ರಿಯೆ ಎನ್ನುವರು.

ಉದಾ– $2Pb(NO_3)_2 + 2KI \rightarrow 2PbI_2 + 2KNO_3$
(ಹಳದಿ ಪ್ರಕ್ಷೇಪ)

**9. ಉತ್ಕರ್ಷಣ ಕ್ರಿಯೆ ಎಂದರೇನು ? ಉತ್ಕರ್ಷಣ ಕ್ರಿಯೆಗೆ ಉದಾ. ಬರೆಯಿರಿ.**

ಉತ್ತರ : ಆಕ್ಸಿಜನ್ ಪಡೆದುಕೊಳ್ಳುವ ಅಥವಾ ಹೈಡ್ರೋಜನ್ ಕಳೆದುಕೊಳ್ಳುವ ಕ್ರಿಯೆಗಳಿಗೆ ಉತ್ಕರ್ಷಣ ಕ್ರಿಯೆ ಎನ್ನುವರು.

ಉದಾ– $Cu + O_2 \rightarrow CO_2$

**10. ಅಪಕರ್ಷಣ ಕ್ರಿಯೆ ಎಂದರೇನು ? ಅಪಕರ್ಷಣ ಕ್ರಿಯೆಗೆ ಉದಾ. ಬರೆಯಿರಿ.**

ಉತ್ತರ : ಆಕ್ಸಿಜನ್ ಕಳೆದುಕೊಳ್ಳುವ ಅಥವಾ ಹೈಡ್ರೋಜನ್ ಪಡೆದುಕೊಳ್ಳುವ ಕ್ರಿಯೆಗಳಿಗೆ ಅಪಕರ್ಷಣ ಕ್ರಿಯೆಗಳು ಎನ್ನುವರು.

ಉದಾ– $CuO + H_2 \rightarrow Cu + H_2O$

**11. ಉತ್ಕರ್ಷಣ–ಅಪಕರ್ಷಣ ಕ್ರಿಯೆಗಳು ಅಥವಾ ರೆಡಾಕ್ಸ್ ಕ್ರಿಯೆಗಳು ಎಂದರೇನು ? ಈ ಕ್ರಿಯೆಗೆ ಉದಾ. ಬರೆಯಿರಿ.**

ಉತ್ತರ : ಕ್ರಿಯೆಯಲ್ಲಿ ಒಂದು ಪ್ರತಿವರ್ತಕವು ಉತ್ಕರ್ಷಣಗೊಂಡು ಮತ್ತೊಂದು ಪ್ರತಿವರ್ತಕವು ಅಪಕರ್ಷಣ ಗೊಳ್ಳುವುದನ್ನು ಉತ್ಕರ್ಷಣ–ಅಪಕರ್ಷಣ ಕ್ರಿಯೆಗಳು ಅಥವಾ ರೆಡಾಕ್ಸ್ ಕ್ರಿಯೆಗಳು ಎನ್ನುವರು.

ಉದಾ–

$$CuO + H_2 \xrightarrow{\text{ಉಷ್ಣ}} Cu + H_2O$$

(ಉತ್ಕರ್ಷಣ: $H_2 \rightarrow H_2O$; ಅಪಕರ್ಷಣ: $CuO \rightarrow Cu$)

**12. ಸಂಕ್ಷಾರಣ (ನಶಿಸುವಿಕೆ) ಎಂದರೇನು ? ಈ ಕ್ರಿಯೆಗೆ ಉದಾ. ಬರೆಯಿರಿ.**

ಉತ್ತರ : ಕೆಲವು ಲೋಹಗಳು ತೇವಾಂಶ , ಗಾಳಿ ಮತ್ತು ಆಮ್ಲಗಳೊಂದಿಗೆ ವರ್ತಿಸಿ ತಮ್ಮ ಹೊಳಪನ್ನು ಕಳೆದುಕೊಳ್ಳುತ್ತವೆ. ಈ ಕ್ರಿಯೆಗೆ ಸಂಕ್ಷಾರಣ (ನಶಿಸುವಿಕೆ) ಎನ್ನುವರು.


ಉದಾ– ಕಬ್ಬಿಣದ ಮೇಲಿನ ಕೆಂಪು ಮಿಶ್ರಿತ ಕಂದು ಬಣ್ಣದ ಪುಡಿ (ತುಕ್ಕು), ಬೆಳ್ಳಿಯ ಮೇಲಿನ ಕಪ್ಪು ಲೇಪನ ಮತ್ತು ತಾಮ್ರದ ಮೇಲಿನ ಹಸಿರು ಲೇಪನಗಳು.

**13. ಕಮಟುವಿಕೆ ಎಂದರೇನು ? ಕಮಟುವಿಕೆಯನ್ನು ತಡೆಗಟ್ಟುವ ವಿಧಾನಗಳನ್ನು ಬರೆಯಿರಿ.**

ಉತ್ತರ : ಕೊಬ್ಬು ಮತ್ತು ಎಣ್ಣೆ ಪದಾರ್ಥಗಳು ಗಾಳಿಯೊಂದಿಗೆ ಉತ್ಕರ್ಷಣಗೊಂಡಾಗ ಅವುಗಳ ವಾಸನೆ ಮತ್ತು ರುಚಿ ಬದಲಾಗುತ್ತದೆ. ಇದನ್ನು ಕಮಟುವಿಕೆ ಎನ್ನುವರು.

ಕಮಟುವಿಕೆಯನ್ನು ತಡೆಗಟ್ಟುವ ವಿಧಾನಗಳು :
* ಆಹಾರ ಪದಾರ್ಥಗಳಿಗೆ ಪ್ರತಿ ಉತ್ಕರ್ಷಕಗಳನ್ನು ಸೇರಿಸುವುದು.
* ಆಹಾರ ಪದಾರ್ಥಗಳನ್ನು ಗಾಳಿ ಪ್ರವೇಶಿಸದ ಸಂಗ್ರಾಹಕಗಳಲ್ಲಿ ಸಂಗ್ರಹಿಸುವುದು.
* ಚಿಪ್ಸ್ ತಯಾರಕರು ಚಿಪ್ಸ್ ಉತ್ಕರ್ಷಣಗೊಳ್ಳುವುದನ್ನು ತಡೆಗಟ್ಟಲು, ಚಿಪ್ಸ್‌ನ ಪೊಟ್ಟಣದಲ್ಲಿ ನೈಟ್ರೋಜನ್ ಅನಿಲವನ್ನು ತುಂಬಿರುತ್ತಾರೆ.

**14. ನೀರಿನ ವಿದ್ಯುತ್ ವಿಭಜನೆ ಕ್ರಿಯೆಯಲ್ಲಿ ಉಪಯೋಗಿಸುವ ಉಪಕರಣದ ಜೋಡಣೆಯ ಚಿತ್ರ ಬಿಡಿಸಿ ಭಾಗಗಳನ್ನು ಗುರುತಿಸಿ. ಪ್ರಕ್ರಿಯೆಯನ್ನು ವಿವರಿಸಿ ?**




# ಚಿತ್ರದಲ್ಲಿ ತೋರಿಸಿದಂತೆ, ಗ್ರಾಫೈಟ್ ದಂಡಗಳನ್ನು 6Volt ಬ್ಯಾಟರಿಗೆ ಸಂಪರ್ಕಿಸಿದಾಗ ನೀರಿನ ವಿಭಜನ ಕ್ರಿಯೆ ನಡೆದು, ಆ್ಯನೋಡ್‌ನಲ್ಲಿ ಆಕ್ಸಿಜನ್ ಮತ್ತು ಕ್ಯಾಥೋಡ್‌ನಲ್ಲಿ ಹೈಡ್ರೋಜನ್ 2:1 ಅನುಪಾತದಲ್ಲಿ ಸಂಗ್ರಹವಾಗುತ್ತವೆ.

# ಶುದ್ಧ ನೀರು ವಿದ್ಯುತ್ ಅವಾಹಕವಾಗಿದ್ದು , ವಾಹಕತೆಯನ್ನು ಉಂಟುಮಾಡಲು ಕ್ರಿಯೆ ಜರಗುವ ಮೊದಲು ನೀರಿಗೆ ಸಲ್ಫೂರಿಕ್ ಆಮ್ಲದ ಕೆಲವು ಹನಿಗಳನ್ನು ಸೇರಿಸುವುದು ಅವಶ್ಯಕ.


(.............................ಮುಂದುವರೆಯುತ್ತದೆ)



ಪ್ರತಿಯೊಬ್ಬ ಮಕ್ಕಳಿಗೂ ಶಿಕ್ಷಣ, ಸಮೃದ್ಧ ಸಮಾಜಕ್ಕೆ ವರ
ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಸಾಮೂಹಿಕ ಓದಿಗೆ ಸಹಕರಿಸಿ
Contact for Ads: M: 9448633038

Scan For Digital Colourful
HAMPI TIMES E-paper


ಮಾರ್ಗದರ್ಶಿ ವಿಜ್ಞಾನ ಶಿಕ್ಷಕರು:
ಶಿವತನಯ ಎಸ್.ಸಿ. ಸಹ ಶಿಕ್ಷಕರು,
ಎಸ್.ಜಿ.ಬಿ. ಪ್ರೌಢಶಾಲೆ ಬೆಣಕಲ್ಲು
ಹ.ಬೊ.ಹಳ್ಳಿ (ತಾ)



## ಸ್ಟುಡೆಂಟ್ ಕಾಲಂ

# ಬದುಕು ಬದಲಿಸಿದ ತಾತ



ಕನಕಪುರ ಎಂಬ ಗ್ರಾಮದಲ್ಲಿ ಎರಡು ಮಧ್ಯವರ್ಗದ ಕುಟುಂಬಗಳು ಅನ್ಯೋನ್ಯವಾಗಿದ್ದವು. ರಾಮಪ್ಪ ಮತ್ತು ಲಕ್ಷ್ಮಿ ಅವರ ಕುಟುಂಬ ಹಾಗೂ ಕೃಷ್ಣಪ್ಪ ಮತ್ತು ಲಲಿತ ಅವರ ಕುಟುಂಬ. ರಾಮಪ್ಪ ಮತ್ತು ಲಕ್ಷ್ಮೀಗೆ ಗೀತಾ ಒಬ್ಬಳೇ ಮಗಳು. ಕೃಷ್ಣಪ್ಪ ಮತ್ತು ಲಲಿತಾಗು ಶ್ವೇತ ಒಬ್ಬಳೇ ಮಗಳು. ಗೀತಾ ಶಾಲೆಯಲ್ಲಿ ಓದುವುದರಲ್ಲಿ ಮುಂದೆ ಇದ್ದಳು. ಅವಳಿಗೆ ನಾನು ಓದುತ್ತೇನೆ ಎಂಬ ಅಹಂಕಾರ ಇತ್ತು. ಶ್ವೇತಾಗೆ ಓದುವುದಕ್ಕೆ ಬರ್ತಾ ಇರಲಿಲ್ಲ. ಅವಳು ಶಾಲೆಯಲ್ಲಿ ನಡೆಯುವ ಎಲ್ಲಾ ಪರೀಕ್ಷೆಯಲ್ಲಿ ಉತ್ತೀರ್ಣ ಆಗುತ್ತಿರಲಿಲ್ಲ. ಗೀತಾ 10ನೇ ತರಗತಿ ಪರೀಕ್ಷೆಯಲ್ಲಿ 99% ಅಂಕ ಪಡೆಯುತ್ತಾಳೆ. ಆದರೆ ಶ್ವೇತಾ ಆ ಪರೀಕ್ಷೆಯಲ್ಲಿ ಫೇಲಾದಳು. ಆಗ ಶ್ವೇತ ನಾನು ಹೊಲದಲ್ಲಿ ಕೆಲಸ ಮಾಡಿ ಜೀವನ ನಡೆಸಬೇಕು ಎಂದುಕೊಂಡಳು.

ಒಂದು ದಿನ ಗೀತಾ ಶ್ವೇತಾಳ ಮನೆಗೆ ಬಂದು 'ಒಂದು ಸಣ್ಣ ಪರೀಕ್ಷೆಯಲ್ಲಿ ಉತ್ತೀರ್ಣ ಆಗಿಲ್ಲ ಅಂದ್ರೆ ನೀನು ಬದುಕಿ ಉಪಯೋಗವಿಲ್ಲ' ಎಂದು ಶ್ವೇತಾಳಿಗೆ ನೋವಾಗುವಂತೆ ಮಾತನಾಡಿದಳು. ಈ ಮಾತು ಶ್ವೇತಾಳಿಗೆ ಭಾರಿ ಅಘಾತವುಂಟು ಮಾಡಿತು. ಕೂಡಲೇ ಶ್ವೇತಾ ಊರಿನಲ್ಲಿದ್ದ ಬಾವಿಯ ಬಳಿ ಹೋದಳು. ಇನ್ನೇನು ಅವಳು ಬಾವಿಯಲ್ಲಿ ಬೀಳುವ ಸಮಯಕ್ಕೆ ಸರಿಯಾಗಿ ಒಬ್ಬ ತಾತ ಕೂಗಿ 'ಮಗಳೇ ಇಲ್ಲಿ ನಾನು ಹೇಳೋ ಮಾತು ಕೇಳು. ಬಾ ಈ ಕಡೆ' ಎಂದರು. ಆಗ ಶ್ವೇತಾ ತಾತನ ಬಳಿ ಹೋದಳು. 'ಹೇಳು ತಾತ ಯಾಕೆ ನನ್ನ ಕರೆದಿದ್ದು?' ಎಂದಳು. ಆಗ ತಾತ 'ಯಾಕಮ್ಮ ಬಾವಿಗೆ ಬೀಳುವ ನಿರ್ಧಾರ ಮಾಡಿದೆ. ಅಂತಹ ಕಷ್ಟ ಏನಿದೆ ನಿನಗೆ' ಎಂದನು. ಆಗ ಶ್ವೇತಾ 'ತಾತ ನಾನು ಪರೀಕ್ಷೆಯಲ್ಲಿ ಉತ್ತೀರ್ಣ ಆಗಿಲ್ಲ. ಅದಕ್ಕೆ ನಾನು ಯಾಕೆ ಬದುಕಬೇಕು?' ಎಂದಳು. 'ಇಷ್ಟು ಚಿಕ್ಕ ವಿಷಯಕ್ಕೆ ಸಾಯುವ ನಿರ್ಧಾರ ಮಾಡ್ತಿದ್ದೀಯಾ? ಒಮ್ಮೆ ಪ್ರಾಣ ಹೋದರೆ ವಾಪಸ್ ಬರುವುದಿಲ್ಲ' ಎಂದನು. 'ತಾತ ನನಗೆ ಓದುವುದಕ್ಕೆ ಬರುವುದಿಲ್ಲ, ಯಾವ ಪರೀಕ್ಷೆಯಲ್ಲೂ ನಾನು ಪಾಸ್ ಆಗುವುದಿಲ್ಲ' ಎಂದಳು ಶ್ವೇತಾ.

ಆಗ ತಾತ 'ನಮ್ಮ ಕೈಯಲ್ಲಿ ಆಗದೆ ಇರೋ ಅಸಾಧ್ಯ ಕೆಲಸ ಯಾವುದೂ ಇಲ್ಲ. ಸತತ ಪ್ರಯತ್ನದಿಂದ ಮತ್ತು ಪರಿಶ್ರಮದಿಂದ ಎಲ್ಲವೂ ಸಾಧ್ಯ' ಎಂದರು. ಆಗ ಶ್ವೇತ 'ಹೌದು ತಾತ, ಇನ್ಮೇಲೆ ನಾನು ಸತತ ಪ್ರಯತ್ನ ಮತ್ತು ಪರಿಶ್ರಮದಿಂದ ಹತ್ತನೇ ತರಗತಿ ಪರೀಕ್ಷೆ ಬರೆದು ಮುಂದೆ ಡಾಕ್ಟರ್ ಆಗ್ತೀನಿ' ಅಂತ ಹೇಳಿದಳು. ಆಗ ತಾತ 'ಒಳ್ಳೇದಾಗಲಿ, ಇನ್ನೊಮ್ಮೆ ಸಾಯುವ ನಿರ್ಧಾರ ಮಾಡಬೇಡ' ಎಂದನು. 'ಸರಿ ತಾತ ನಾನು ಮನೆಗೆ ಹೋಗ್ತೀನಿ' ಎಂದು ಶ್ವೇತಾ ಮನೆಗೆ ಬಂದಳು.

ಶ್ವೇತಾಳು ಮತ್ತೊಮ್ಮೆ 10ನೇ ತರಗತಿ ಪರೀಕ್ಷೆ ಬರೆದು ಉತ್ತೀರ್ಣ ಆದಳು. ಮುಂದೆ ಅವಳು ಪಿಯುಸಿ ಅಲ್ಲಿ ಸೈನ್ಸ್ ತಗೊಂಡು ಗೀತಾ ಓದುತ್ತಿರುವ ಕಾಲೇಜ್ ಸೇರಿದಳು. ಹಗಲು ರಾತ್ರಿ ಕಷ್ಟಪಟ್ಟು ಪರಿಶ್ರಮದಿಂದ ಪಿಯುಸಿಯಲ್ಲಿ 98% ಅಂಕ ಪಡೆದಳು. ಆದರೆ ಗೀತಾ 60% ಅಂಕ ಪಡೆದಳು. ಗೀತಾಳಿಗೆ ತುಂಬಾ ಕೋಪ ಬಂತು. ಶ್ವೇತಾಳ ತಂದೆ ತಾಯಿ ತುಂಬಾ ಖುಷಿ ಪಟ್ಟರು.

ಅವಳ ಕನಸಿನಂತೆ ಡಾಕ್ಟರ್ ಓದಬೇಕು ಎಂದುಕೊಂಡಳು. ಆದರೆ ಅವರ ಮನೆಯಲ್ಲಿ ಹಣ ಇರಲಿಲ್ಲ. ಆಗ ಶ್ವೇತಾಳ ತಂದೆ ಗೀತಾಳ ತಂದೆಯ ಹತ್ತಿರ ಸಹಾಯ ಕೇಳಲು ಹೋದನು. ಕೋಪದಲ್ಲಿ ಇದ್ದ ಗೀತಾ ಶ್ವೇತಾಳ ತಂದೆಗೆ 'ನಿಮ್ಮ ಹತ್ತಿರ ಓದಿಸಲು ಹಣ ಇಲ್ಲ ಅಂದ್ರೆ ಯಾಕೆ ಓದುಸ್ತೀರಾ? ನಿಮ್ಮ ಯೋಗ್ಯತೆಗೆ ಅವಳು ಡಾಕ್ಟರ್ ಆಗ್ತಾಳ?' ಎಂದು ನೋವಾಗುವಂತೆ ಮಾತನಾಡಿದಳು. ಮತ್ತೆ ಶ್ವೇತಾಳ ತಂದೆ ಮನೆ ಪತ್ರವನ್ನು ಅವರ ಊರಿನ ಸಾಹುಕಾರ್ ಹತ್ರ ಕೊಟ್ಟು ಸಾಲ ತಗೊಂಡು ಶ್ವೇತಾಳನ್ನು ಓದಿಸಿ ಡಾಕ್ಟರ್ ಮಾಡಿದನು. ಶ್ವೇತಾಳು ಡಾಕ್ಟರ್ ಆದ ಮೇಲೆ ಮನೆ ಪತ್ರ ಬಿಡಿಸಿಕೊಂಡಳು. ಆವಾಗ ಅವಳ ಚಿಕ್ಕಂದಿನಲ್ಲಿ ನಡೆದ ಘಟನೆ ನೆನಪಾಯಿತು. ಅವತ್ತು ಆ ತಾತ ಇದ್ದಿಲ್ಲ ಎಂದರೆ ನಾನು ಇವತ್ತು ಡಾಕ್ಟರ್ ಆಗ್ತಿದ್ದಿಲ್ಲ ಎಂದು ಅವಳ ಕಣ್ಣಲ್ಲಿ ನೀರು ತುಂಬಿತು. ತಾಳಿದವನು ಬಾಳಿಯಾನು ಎನ್ನುವ ಮಾತು ನಿಜವಾಯಿತು. ಸತತ ಪ್ರಯತ್ನದಿಂದ ಗೆಲುವು ಸಾಧ್ಯ ಎಂದು ಶ್ವೇತ ತೋರಿಸಿಕೊಟ್ಟಳು.

**– ಎಂ.ರೇಷ್ಮಾ. 10ನೇ ತರಗತಿ.**
ಸರ್ಕಾರಿ ಪ್ರೌಢಶಾಲೆ. ಬಸರಕೋಡು. ಹ.ಬೊ.ಹಳ್ಳಿ(ತಾ)
ವಿಜಯನಗರ(ಜಿ)

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

**ಭಾರತ ದೇಶದ ಇತಿಹಾಸ, ಪುರಾತತ್ವ, ಭಾಷೆ, ಸಾಹಿತ್ಯ, ಶಾಸನಗಳ ಕುರಿತು ಆಸಕ್ತರಾಗಿ, ಅಧ್ಯಯನ ಮಾಡಿ ಇಲ್ಲಿನ ಸಂಪತ್ತನ್ನು ಭಾರತೀಯರಿಗೂ ಹಾಗೂ ವಿಶ್ವಕ್ಕೂ ತೋರಿಸಿ, ಆ ಮೂಲಕ ಭಾರತದ ಶ್ರೇಷ್ಠತೆಯನ್ನು ಜಾಗತಿಕ ಮಟ್ಟದಲ್ಲಿ ಎತ್ತಿ ಹಿಡಿದರ ಕೆಲ ವಿದೇಶಿಗರಲ್ಲಿ ಅಗ್ರಗಣ್ಯರಾದವರೇ ನ್ಯಾಯಾಧೀಶ ವಿಲಿಯಂ ಜೋನ್ಸ್.**

# ಪ್ರಾಚ್ಯ ತಜ್ಞ ವಿಲಿಯಂ ಜೋನ್ಸ್




ಭಾರತಕ್ಕೆ ಬ್ರಿಟಿಷರು ಬಂದ ಮೂಲ ಉದ್ದೇಶವೆಂದರೆ ವ್ಯಾಪಾರ ಮಾಡುವುದು. ಆದರೆ ಆ ಸಂದರ್ಭದಲ್ಲಿ ಭಾರತದಲ್ಲಿ ತುಸು ಅಸ್ತವ್ಯಸ್ತವಾಗಿದ್ದ ರಾಜಕಾರಣ, ರಾಜರ ಮಧ್ಯದ ಅನೈಕ್ಯತೆ, ಇಲ್ಲಿದ್ದ ಅನಕ್ಷರತೆ ಇವುಗಳ ಲಾಭ ಪಡೆದು ಇಡೀ ದೇಶವನ್ನು ಅತ್ಯಂತ ಬುದ್ಧಿವಂತಿಕೆಯಿಂದ ತಮ್ಮ ವಶಕ್ಕೆ ತೆಗೆದುಕೊಂಡರು. ಆ ಸಂದರ್ಭದಲ್ಲಿ ದೇಶವನ್ನಾಳಲು ಅನೇಕ ಅಧಿಕಾರಿಗಳು, ಸೇನಾನಿಗಳು, ಪರಿಣಿತರು ಇಂಗ್ಲೆಂಡಿನಿಂದ ಇಲ್ಲಿಗೆ ಬಂದರು. ಹಾಗೆ ಬಂದವರ ಉದ್ದೇಶ ಭಾರತದಲ್ಲಿದ್ದ ಅಪಾರ ಸಂಪತ್ತನ್ನು ವ್ಯವಸ್ಥಿತವಾಗಿ ದೋಚುವುದೇ ಆಗಿತ್ತು. ಇಲ್ಲಿನ ಜನರ ಮುಗ್ಧತೆಯನ್ನೂ, ಒಳ್ಳೆಯತನವನ್ನೂ ದುರುಪಯೋಗ ಪಡಿಸಿಕೊಂಡು ನಿರ್ದಯವಾಗಿ ರಾಜ್ಯಭಾರ ಮಾಡುತ್ತಿದ್ದರು. ಇಂತಹವರ ಮಧ್ಯೆ ಅಪರೂಪಕ್ಕೆ ಬೆರಳೆಣಿಕೆಯಷ್ಟು ಜನ ಒಳ್ಳೆಯ ಅಧಿಕಾರಿಗಳೂ ಬಂದರು. ಹಾಗೆ ಬಂದವರು ನಮ್ಮ ದೇಶದ ಇತಿಹಾಸ, ಪುರಾತತ್ವ, ಭಾಷೆ, ಸಾಹಿತ್ಯ, ಶಾಸನಗಳ ಕುರಿತು ಆಸಕ್ತರಾಗಿ, ಅಧ್ಯಯನ ಮಾಡಿ ಆ ಕುರಿತಾದ ಸಂಪತ್ತನ್ನು ಭಾರತೀಯರಿಗೂ ಹಾಗೂ ವಿಶ್ವಕ್ಕೂ ತೋರಿಸಿದರು. ಆ ಮೂಲಕ ಭಾರತದ ಶ್ರೇಷ್ಠತೆಯನ್ನು ಜಾಗತಿಕ ಮಟ್ಟದಲ್ಲಿ ಎತ್ತಿ ಹಿಡಿದರು. ಅಂತಹವರಲ್ಲಿ ಅಗ್ರಗಣ್ಯರಾದವರೇ ವಿಲಿಯಂ ಜೋನ್ಸ್.

ವಿಲಿಯಂ ಜೋನ್ಸ್ ತಮ್ಮ ಮೂವತ್ತೇಳನೆಯ ವಯಸ್ಸಿನಲ್ಲಿ ಕೊಲ್ಕತ್ತಾದ ಸುಪ್ರೀಂ ಕೋರ್ಟ್‌ಗೆ ನ್ಯಾಯಾಧೀಶರಾಗಿ ಬಂದರು. ಎಲ್ಲರಂತೆ ತಮ್ಮ ಉದ್ಯೋಗಕ್ಕಷ್ಟೇ ಸೀಮಿತರಾಗದೇ ಈ ದೇಶದ ಇತಿಹಾಸ, ಪುರಾಣ, ಭಾಷೆಗಳನ್ನು ಅರಿಯಲು ಯತ್ನಿಸಿದರು. ಅದಕ್ಕಾಗಿ 'Asiatic Society of Bengal' ಎಂಬ ಅಧ್ಯಯನ ಸಂಸ್ಥೆಯನ್ನು ಆರಂಭಿಸಿದರು. ಸಂಸ್ಕೃತ ಭಾಷೆಯನ್ನು ಕಲಿತು ಮಹಾಕವಿ ಕಾಳಿದಾಸನ ಶಾಕುಂತಲ ಕಾವ್ಯವನ್ನು ಇಂಗ್ಲಿಷ್ ಭಾಷೆಗೆ ಅನುವಾದ ಮಾಡಿದರು. ಇದು ಇಂಗ್ಲೆಂಡಿನಲ್ಲಿ ಮತ್ತು ಇಂಗ್ಲಿಷ್ ಬಲ್ಲ ಎಲ್ಲ ದೇಶಗಳಲ್ಲಿ ಅಗಾಧ ಸಂಚಲನವನ್ನು ಮೂಡಿಸಿತು. ಭಾರತದಂತಹ ದೇಶದಲ್ಲಿ ಇಂತಹ ಶ್ರೇಷ್ಠ ಕೃತಿ ಹಾಗೂ ಕಾಳಿದಾಸ ನಂತಹ ಮಹಾಕವಿ ಮತ್ತು ಸಂಸ್ಕೃತದಂತಹ ಅನನ್ಯ ಭಾಷೆ ಇರುವುದು ಬೆರಗನ್ನು ಉಂಟುಮಾಡಿತು. ಇಡೀ ಜಗತ್ತು ಭಾರತದೆಡೆಗೆ ಆಶ್ಚರ್ಯದಿಂದ ನೋಡತೊಡಗಿತು. ಜಾಗತಿಕ ಮಟ್ಟದಲ್ಲಿ ಭಾರತದ ಗೌರವ ಹೆಚ್ಚಾಗತೊಡಗಿತು. ಬಡವರ, ಅನಕ್ಷರಸ್ಥರ ನಾಡು ಎಂಬುದು ಮರೆಯಾಗಿ ಸಾಹಿತ್ಯ ಕೃತಿಗಳ ಮೂಲಕ ಈ ದೇಶದ ವೈಭವ ಜಗತ್ತಿನೆದುರು ಅನಾವರಣಗೊಂಡಿತು. ಇದಕ್ಕೆ ಕಾರಣರಾದವರು ವಿಲಿಯಂ ಜೋನ್ಸ್.

ವಿಲಿಯಂ ಜೋನ್ಸ್ (28 Sep 1746 – 27 Apr 1794) ಇಂಗ್ಲೆಂಡ್ ದೇಶದ ಲಂಡನ್ ನಗರದಲ್ಲಿ ಜನಿಸಿದರು. ತಂದೆಯ ಹೆಸರೂ ಕೂಡಾ ವಿಲಿಯಂ ಜೋನ್ಸ್ ಹಾಗೂ ತಾಯಿ ಮೇರಿ ನಿಕ್ ಜೋನ್ಸ್. ಇವರ ತಂದೆ ವಿಲಿಯಂ ಜೋನ್ಸ್ ಒಬ್ಬ ಗಣಿತಜ್ಞರಾಗಿದ್ದರು. ಕೇವಲ ಮೂರು ವರ್ಷದವರಿದ್ದಾಗ ತಂದೆಯನ್ನು ಕಳೆದುಕೊಂಡ ವಿಲಿಯಂ ಜೋನ್ಸ್ ತಾಯಿಯ ಆಶ್ರಯದಲ್ಲಿ ಬೆಳೆದರು. ತಮ್ಮ ಬಾಲ್ಯದ ವಿದ್ಯಾಭ್ಯಾಸವನ್ನು ಹ್ಯಾರೋ ಲೋಯರ್ ಸ್ಕೂಲ್ ನಲ್ಲಿ ಪಡೆದರು. ಉನ್ನತ ವಿದ್ಯಾಭ್ಯಾಸವನ್ನು ಆಕ್ಸ್ ಫರ್ಡ್ ಯೂನಿವರ್ಸಿಟಿಯಲ್ಲಿ ಪಡೆದರು. 1768 ರಲ್ಲಿ ತಮ್ಮ ಪದವಿ ವಿದ್ಯಾಭ್ಯಾಸವನ್ನು ಹಾಗೂ 1773 ರಲ್ಲಿ ಎಂ.ಎ. ಪದವಿಯನ್ನೂ ಪೂರೈಸಿದರು.

ವಿಲಿಯಂ ಜೋನ್ಸ್ ಬಾಲ್ಯದಲ್ಲಿದ್ದಾಗಲೇ ಅಪಾರ ಬುದ್ಧಿಶಕ್ತಿಯ ಬಾಲಕ ಎಂದು ಹೆಸರಾಗಿದ್ದರು. ವಿದ್ಯಾರ್ಥಿಯಾಗಿದ್ದಾಗಲೇ ಅನೇಕ ಭಾಷೆಗಳನ್ನು ಕಲಿತಿದ್ದರು. ಸ್ಪ್ಯಾನಿಷ್, ಪೋರ್ಚುಗೀಸ್, ಅರೇಬಿಕ್, ಹೀಬ್ರೂ, ಫ್ರೆಂಚ್, ಇಟಾಲಿಯನ್, ಪರ್ಶಿಯನ್ ಭಾಷೆಗಳು ಅವರಿಗೆ ಕರಗತವಾಗಿದ್ದವು. ಕಾನೂನು ವಿದ್ಯಾಭ್ಯಾಸದ ಕುರಿತು ಅವರಿಗೆ ಅತೀವ ಆಸಕ್ತಿಯಿತ್ತು. ಇಂಗ್ಲಿಷ್ ನಲ್ಲಿ ಕವಿತೆಗಳನ್ನೂ ಬರೆದಿದ್ದರು. ಇಂತಹ ಮಕ್ಕಳನ್ನು ಇಂಗ್ಲಿಷ್ ಭಾಷೆಯಲ್ಲಿ Prodigy ಎಂದು ಕರೆಯುತ್ತಾರೆ. ಹಾಗೆಯೇ ಇವರು ಹೆಸರಾಗಿದ್ದರು. ಅವರ ಬದುಕಿನ ಕೊನೆಯ ಹಂತದಲ್ಲಿ ಅವರು ಸುಮಾರು ಇಪ್ಪತ್ತೆಂಟು ಭಾಷೆಗಳಲ್ಲಿ ಪರಿಣಿತರಾಗಿದ್ದರು. ಭಾಷೆಗಳನ್ನು ಕಲಿಯುವುದು ಅವರಿಗೆ ಸರಾಗವಾಗಿತ್ತು. ಜನ್ಮಜಾತವಾಗಿಯೇ ಬಂದಿರಬಹುದು.

ತಮ್ಮ ಇಪ್ಪತ್ತೆರಡನೆಯ ವಯಸ್ಸಿನ ವೇಳೆಗೆ ಅವರೊಬ್ಬ ಪ್ರಾಚ್ಯತಜ್ಞರು ಎನಿಸಿಕೊಂಡಿದ್ದರು. ಗಣಿತ ಮತ್ತು ಸಸ್ಯಶಾಸ್ತ್ರದಲ್ಲಿ ವಿಶೇಷ ಅಭಿರುಚಿ ಇತ್ತು. ಸಸ್ಯಶಾಸ್ತ್ರದ ಮೇಲಿನ ಪ್ರೀತಿಯನ್ನು ಕೊನೆಯವರೆಗೂ ಉಳಿಸಿಕೊಂಡಿದ್ದರು. ಭಾರತೀಯ ಹಾಗೂ ಪಾಶ್ಚಾತ್ಯ ಸಂಗೀತಗಳ ತುಲನಾತ್ಮಕ ಅಧ್ಯಯನ ಮಾಡಿದ್ದರು.




ಬಿ.ಎಂ.ರಾಜಶೇಖರ
ಮೊ: 9900705323

Scan For Digital Colourful
HAMPI TIMES E-paper

ಇವರ ಕುರಿತು ತಿಳಿದಿದ್ದ ಡೆನ್ಮಾರ್ಕಿನ ರಾಜ ಕ್ರಿಶ್ಚಿಯನ್ VII ಅವರು ವಿಲಿಯಂ ಜೋನ್ಸ್ ಅವರನ್ನು ಭೇಟಿಯಾದರು. ಡೆನ್ಮಾರ್ಕಿನ ರಾಜನ ಕೋರಿಕೆಯ ಮೇರೆಗೆ 'ಮಿರ್ಜಾ ಮೆಹದಿ ಖಾನ್ ಅಸ್ತರಾಬಾದಿ' ಅವರು ಪರ್ಶಿಯನ್ ಭಾಷೆಯಲ್ಲಿ ರಚಿಸಿದ್ದ ನಾದಿರ್ ಶಾ ಅವರ ಜೀವನ ಚರಿತ್ರೆಯನ್ನು 'ಹಿಸ್ಟೊಯಿರ್ ಡಿ ನಾಡರ್ ಚಾ' (1770) ಎಂಬ ಹೆಸರಿನಲ್ಲಿ ಫ್ರೆಂಚ್ ಭಾಷೆಗೆ ಅನುವಾದಿಸಿದರು. ಅವರು ಎಂ. ಎ ಓದುತ್ತಿದ್ದಾಗ ಇದನ್ನು ಅನುವಾದಿಸುವ ಒತ್ತಡ ಒದಗಿ ಬಂದಿತು ಹಾಗಾಗಿ ಅವರು ಎಂ.ಎ. ಪೂರೈಸಲು ಒಂದು ವರ್ಷ ತಡವಾಯಿತು. 1771 ರಲ್ಲಿ ಅವರು 'ಗ್ರಾಮರ್ ಅಫ್ ದಿ ಪರ್ಶಿಯನ್ ಲಾಂಗ್ವೇಜ್' ಎಂಬ ಪರ್ಶಿಯನ್ ವ್ಯಾಕರಣ ಗ್ರಂಥವನ್ನು ಇಂಗ್ಲಿಷ್ ನಲ್ಲಿ ರಚಿಸಿದರು. ತೀರಾ ಇತ್ತೀಚಿನವರೆಗೂ ಇದು ಆ ಭಾಷೆಯ ಅಧಿಕೃತ ವ್ಯಾಕರಣ ಗ್ರಂಥವಾಗಿತ್ತು. ಇದೆಲ್ಲದರಿಂದಾಗಿ ಅವರಿಗೆ ಶ್ರೇಷ್ಠ ಅನುವಾದಕರೆಂದೂ, ಬಹುಭಾಷಾ ತಜ್ಞರೆಂದೂ, ಪ್ರಾಚ್ಯ ವಿದ್ಯಾ ಪರಿಣಿತರೆಂದೂ ಕೀರ್ತಿ ಬಂದಿತು. ಭಾರತಕ್ಕೆ ಅವರು ಬರಲು ಇವೆಲ್ಲವೂ ಕಾರಣಗಳಾದವು. ಹೀಗಾಗಿ ಅವರಿಗೆ ಪರ್ಶಿಯನ್ ಜೋನ್ಸ್, ಓರಿಯಂಟಲ್ ಜೋನ್ಸ್, ಲಿಂಗ್ವಿಸ್ಟಿಕ್ ಜೋನ್ಸ್ ಎಂಬ ಹೆಸರುಗಳು ಗೌರವಪೂರ್ಣವಾಗಿ ದೊರೆತವು. ಭಾರತಕ್ಕೆ ಬಂದ ಮೇಲೆ ಅವರನ್ನು 'ಜೋನ್ಸ್ ಆಫ್ ಆಕ್ಸ್ ಫರ್ಡ್' ಎಂದು ಕರೆಯುತ್ತಿದ್ದರು. ಆಮೇಲೆ ಅವರು ಇದನ್ನು ತಮ್ಮ ಕಾವ್ಯನಾಮವನ್ನಾಗಿಯೂ ಬರೆದುಕೊಂಡರು.

ಹಣಕಾಸಿನ ತೊಂದರೆಯಿಂದಾಗಿ ಕೆಲ ಕಾಲ ಮನೆಪಾಠ ಹೇಳಿ ಹಣ ಸಂಪಾದಿಸಿದರು. ವಕೀಲರಾಗಲು ಇಷ್ಟಪಟ್ಟು ಟೆಂಪಲ್ ಕಾಲೇಜಿನಲ್ಲಿ ಮೂರು ವರ್ಷ ಅಭ್ಯಾಸ ಮಾಡಿ ಕಾನೂನು ಪದವಿ ಪಡೆದು ವಕೀಲರಾದರು. ನಂತರ ವೇಲ್ಸ್ ನಲ್ಲಿ ಕೆಲ ಕಾಲ ನ್ಯಾಯಾಧೀಶರಾಗಿ ಕೆಲಸ ಮಾಡಿದರು. 1772 ರಲ್ಲಿ 'ರಾಯಲ್ ಸೊಸೈಟಿಯ ಫೆಲೋ' ಆಗಿ ಆಯ್ಕೆಯಾದರು. ಅಲ್ಲದೆ 'ದಿ ಕ್ಲಬ್' ಎನ್ನುವುದರ ಸದಸ್ಯರಾಗಿ ನಂತರ 1780 ರಲ್ಲಿ ಅದರ ಅಧ್ಯಕ್ಷರೂ ಆದರು. ಇವೆಲ್ಲವೂ ಆ ಕಾಲದಲ್ಲಿ ಇಂಗ್ಲೆಂಡಿನ ಪ್ರತಿಷ್ಠಿತ ಸಂಸ್ಥೆಗಳಾಗಿದ್ದವು. ಇದೆಲ್ಲ ಆದ ಮೇಲೆ ಇಂಗ್ಲೆಂಡಿನ ರಾಜಕೀಯದಲ್ಲಿ ಆಸಕ್ತಿ ಮೂಡಿ ಸಂಸತ್ ಸದಸ್ಯರಾಗುವ ಬಯಕೆಯಿಂದ ಚುನಾವಣೆಗೆ ಸ್ಪರ್ಧಿಸಿದರು. ಆಕ್ಸ್ ಫರ್ಡ್ ಕ್ಷೇತ್ರದಿಂದ ಸ್ಪರ್ಧಿಸಿ ಸೋಲನುಭವಿಸಿದರು. ಅಲ್ಲಿಗೆ ಅವರ ರಾಜಕೀಯದ ಬದುಕು ಮುಗಿಯಿತು.

1783 ನೆಯ ಇಸವಿಯು ವಿಲಿಯಂ ಜೋನ್ಸ್ ಅವರ ಬದುಕಿನಲ್ಲಿ ಒಂದು ಮುಖ್ಯ ತಿರುವನ್ನು ನೀಡಿತು. ಆ ವರ್ಷ ಅವರಿಗೆ ಪ್ರತಿಷ್ಠಿತ 'ನೈಟ್' ಪದವಿ ದೊರೆಯಿತು. ಹಾಗೂ ಭಾರತದ 'ಕೊಲ್ಕತ್ತಾ ಸುಪ್ರೀಂ ಕೋರ್ಟ್'ಗೆ ಮುಖ್ಯ ನ್ಯಾಯಾಧೀಶರನ್ನಾಗಿ ನೇಮಕ ಮಾಡಲಾಯಿತು. ಆ ವರ್ಷವೇ ಜೋನ್ಸ್ ಅವರು ಅನ್ನಾ ಮೇರಿ (Anna Maria Shipley) ಎಂಬುವವರೊಡನೆ ವಿವಾಹವಾದರು. ಆ ವರ್ಷವೇ ಭಾರತಕ್ಕೆ ಬಂದರು. 1783 ರಲ್ಲಿ ನ್ಯಾಯಾಧೀಶರಾಗಿ ಅಧಿಕಾರ ಸ್ವೀಕರಿಸಿದ ನಂತರ 1794 ರ ವರೆಗೆ ಹನ್ನೊಂದು ವರ್ಷಗಳ ಕಾಲ ಸೇವೆ ಸಲ್ಲಿಸಿದರು.




ಭಾರತಕ್ಕೆ ಬಂದೊಡನೆ ಇಲ್ಲಿಯ ಭಾಷೆ, ಇತಿಹಾಸ, ಜನಜೀವನ ವನ್ನು ತಿಳಿದುಕೊಳ್ಳುವ ಆಸೆಯಾಯಿತು. ಮೊದಲೇ ಅವರು ಬಹುಭಾಷಾ ತಜ್ಞರೂ, ಪ್ರಾಚ್ಯ ವಿದ್ಯಾ ಪರಿಣತರೂ ಆಗಿದ್ದರಿಂದ ಇದು ಸಹಜವಾಗಿತ್ತು. ಹಿಂದೂ ಕಾನೂನುಗಳು ಹಾಗೂ ಮುಸ್ಲಿಂ ಕಾನೂನುಗಳನ್ನು ಅಧ್ಯಯನ ಮಾಡಲು ತೊಡಗಿದರು. ಎಲ್ಲಕ್ಕಿಂತ ಅವರನ್ನು ವಿಶೇಷವಾಗಿ ಆಕರ್ಷಿಸಿದ್ದು ಸಂಸ್ಕೃತ ಭಾಷೆ. ಇದನ್ನು ಚೆನ್ನಾಗಿ ಕಲಿಯಬೇಕು ಎಂಬ ಆಸಕ್ತಿಯಿಂದ ಅನೇಕ ಸಂಸ್ಕೃತ ಪಂಡಿತರೊಡನೆ ಚರ್ಚೆ, ಅಧ್ಯಯನ ನಡೆಸಿದರು. ಕಲಿಯುತ್ತಾ ಹೋದಂತೆ ಆಸಕ್ತಿ ಹೆಚ್ಚಿತು. ಭಾಷೆಯನ್ನು ಕಲಿತ ನಂತರ ಸಂಸ್ಕೃತ ಕಾವ್ಯಗಳನ್ನು ಓದಿ ಅಧ್ಯಯನ ಮಾಡಿದರು. ಸಂಸ್ಕೃತ ಭಾಷೆ ಹಾಗು ಕಾವ್ಯಗಳು ಉಳಿದ ಎಲ್ಲ ಭಾಷೆಗಳಿಗಿಂತ ಶ್ರೇಷ್ಠ ಹಾಗೂ ಅನನ್ಯ ಎಂದು ಅವರಿಗೆ ತಿಳಿಯಿತು. ಅನೇಕ ಭಾಷೆಗಳನ್ನು ತಿಳಿದಿದ್ದ ಅವರಿಗೆ ಸಂಸ್ಕೃತದ ವ್ಯಾಕರಣ, ಬಂಧ, ನಯಗಾರಿಕೆ ಹಾಗೂ ಕಾವ್ಯ ಸೌಂದರ್ಯ ಅದ್ಭುತ ಎನಿಸಿದವು. ಈ ಭಾಷೆಗೆ ಮನಸೋತರು. ಇದರ ಮೂಲಕ ಅವರಿಗೆ ಭಾರತದ ಕುರಿತಾಗಿ ಅಪಾರ ಗೌರವ, ಅಭಿಮಾನ ಉಂಟಾಯಿತು. ಪ್ರಾಚ್ಯ ದೇಶಗಳಲ್ಲಿ ಭಾರತ ಹಾಗೂ ಪ್ರಾಚ್ಯ ಭಾಷೆಗಳಲ್ಲಿ ಸಂಸ್ಕೃತ ಅತ್ಯುನ್ನತ ಎಂದು ಭಾವಿಸಿದರು. ಅವರ ಬರಹಗಳಲ್ಲಿ ಇದು ಪದೇ ಪದೇ ಮರುಕಳಿಸಿದೆ.

ಬಂಗಾಳದಲ್ಲಿದ್ದ ನಾಡಿಯಾ ಎಂಬ ನಗರದಲ್ಲಿ ಹಿಂದೂ ವಿಶ್ವವಿದ್ಯಾಲಯ ಇತ್ತು. ಈ ನಾಡಿಯಾವನ್ನು 'ಬಂಗಾಳದ ಆಕ್ಸ್ ಫರ್ಡ್' ಎನ್ನುತ್ತಿದ್ದರು. ಇದು ಸಂಸ್ಕೃತ ಮತ್ತು ತರ್ಕಶಾಸ್ತ್ರದ ಅತ್ಯುನ್ನತ ಕೇಂದ್ರವಾಗಿತ್ತು. ಅಲ್ಲಿದ್ದ 'ರಾಮಲೋಚನ' ಎಂಬ ಪಂಡಿತರ ಬಳಿ ವಿಲಿಯಂ ಜೋನ್ಸ್ ಕೆಲ ಕಾಲ ವೇದಗಳ ಅಭ್ಯಾಸವನ್ನು ಮಾಡಿದರು. ಜ್ಯೋತಿಷ್ಯ ಮತ್ತು ಹಿಂದೂ ಖಗೋಳಶಾಸ್ತ್ರವನ್ನು ಆಸಕ್ತಿಯಿಂದ ಕಲಿತರು. ಹಿಂದೂ ಪಂಡಿತರಲ್ಲಿ ಹಿಂದೂ ಕಾನೂನುಗಳನ್ನು ಕಲಿತರು.

ಭಾರತದ ಭಾಷೆ, ಸಾಹಿತ್ಯ, ಜ್ಞಾನ, ಇತಿಹಾಸ ಇವೆಲ್ಲವನ್ನೂ ಇಂಗ್ಲಿಷ್ ಗೆ ಅನುವಾದಿಸುವ ಹಾಗೂ ಆ ಮೂಲಕ ಜಗತ್ತಿಗೆ ಇದನ್ನೆಲ್ಲ ಪರಿಚಯಿಸುವ ಉದ್ದೇಶದಿಂದ 'ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್' ಎಂಬ ಸಂಸ್ಥೆಯನ್ನು 1784 ರಲ್ಲಿ ಸ್ಥಾಪಿಸಿದರು. ಏಷ್ಯಾದ ಸಂಸ್ಥೆ ಎಂದು ಹೆಸರಿದ್ದರೂ ಅತಿ ಹೆಚ್ಚು ಕೆಲಸ ಮಾಡಿದ್ದು ಭಾರತದ ಕುರಿತಾಗಿ ಮಾತ್ರ. ಇಲ್ಲಿ ಸಂಸ್ಕೃತ ಮತ್ತು ಪರ್ಶಿಯನ್ ಭಾಷೆಯ ಹಸ್ತಪ್ರತಿಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸಲು ಭಾರತೀಯ ವಿದ್ವಾಂಸರನ್ನು ನೇಮಿಸಿಕೊಂಡರು. ಈ ಸಂದರ್ಭದಲ್ಲಿ ಇಂಗ್ಲೆಂಡಿನಿಂದ ಬಂದಿದ್ದ ಇಲ್ಲಿಯ ಇಂಗ್ಲಿಷ್ ಗೆಳೆಯರಿಗಿಂತ ಭಾರತೀಯ ವಿದ್ವಾಂಸರು, ಪಂಡಿತರೊಂದಿಗೆ ಬೆರೆಯಲು, ಆತ್ಮೀಯರಾಗಲು, ಮಾತನಾಡಲು ಬಯಸುತ್ತಿದ್ದರು. ಭಾರತೀಯ ಉಡುಪು ಧರಿಸುತ್ತಿದ್ದರು. ಆಗ ವರ್ಷಕ್ಕೆ ಆರು ಸಾವಿರ ಪೌಂಡ್ ವೇತನ ಅವರಿಗೆ ಇತ್ತು. ಇದು ಅಂದಿನ ಲೆಕ್ಕದಲ್ಲಿ ಅಪಾರ ಮೊತ್ತ ಎನ್ನಬಹುದು. ಇದರ ಬಹುಪಾಲು ಹಣವನ್ನು ಈ ಸಂಸ್ಥೆಗಾಗಿಯೇ ಅವರು ಬಳಸುತ್ತಿದ್ದರು ಎನ್ನಲಾಗಿದೆ.

ಕಾಳಿದಾಸನ ಕಾವ್ಯಗಳಿಗೆ ಮಾರುಹೋದ ವಿಲಿಯಂ ಜೋನ್ಸ್ 1788 ರಲ್ಲಿ ಅಭಿಜ್ಞಾನ ಶಾಕುಂತಲವನ್ನು ಇಂಗ್ಲಿಷ್ ಗೆ ಅನುವಾದಿಸಿದರು. ಇದಕ್ಕೆ ಅವರು 'The Sacontalá or The Fatal Ring' ಎಂಬ ಶೀರ್ಷಿಕೆ ನೀಡಿದರು. ಶಕುಂತಲಾ ಇಂಗ್ಲಿಷ್ ಭಾಷೆಗೆ ಅನುವಾದ ಆಗುತ್ತಿದ್ದಂತೆ ಇಂಗ್ಲೆಂಡಿನಲ್ಲಿ ಹಾಗೂ ಇಂಗ್ಲಿಷ್ ಬಲ್ಲವರಲ್ಲಿ ಸಂಚಲನ ಮೂಡಿಸಿತು. ಭಾರತದ ಸಂಸ್ಕೃತಭಾಷೆ, ಕಾಳಿದಾಸನ ಕವಿತ್ವ, ಆ ಮಾಧುರ್ಯ ಎಲ್ಲರಲ್ಲಿ ಬೆರಗು ಮೂಡಿಸಿತು. ಭಾರತದ ಕುರಿತಾಗಿ ಗೌರವ ಮೂಡಿತು. ಪಾಶ್ಚಾತ್ಯರು ಭಾರತವನ್ನು ನೋಡುವ, ಗ್ರಹಿಸುವ ಬಗೆ ಬದಲಾಯಿತು. ಶಾಕುಂತಲ ಭಾಷಾಂತರವಾದಾಗ ಇಂಗ್ಲಿಷ್ ನಲ್ಲಿ ರೊಮ್ಯಾಂಟಿಕ್ ಕುರಿತಾದ ಕಾವ್ಯ ಇನ್ನೂ ಶೈಶವಾವಸ್ಥೆಯಲ್ಲಿತ್ತು. ಕಾಳಿದಾಸನ ಈ ಕಾವ್ಯವನ್ನು ರೊಮ್ಯಾಂಟಿಕ್ ಕಾವ್ಯ, ನಯ, ನವುರು, ಸೊಬಗು ತುಂಬಿದ ಅತ್ಯುನ್ನತ ಪ್ರೇಮದ ಅಭಿವ್ಯಕ್ತಿ ಎಂದು ಭಾವಿಸಿದರು. ಕಾಳಿದಾಸನ ಕುರಿತು ಅಪಾರ ಗೌರವವನ್ನು ವ್ಯಕ್ತಪಡಿಸಸಿದರು. ಇದರಿಂದ ಯುರೋಪಿನ ಮೇಲೆ ಭಾರತದ ಚಿಂತನೆ ಹಾಗೂ ಕಾವ್ಯಗಳ ಪ್ರಭಾವ ಉಂಟಾಯಿತು. ವಿಶೇಷವಾಗಿ ಇಂಗ್ಲಿಷ್ ಕವಿಗಳು ರೊಮ್ಯಾಂಟಿಕ್ ಕಾವ್ಯ ರಚಿಸಲು, ರೊಮ್ಯಾಂಟಿಕ್ ಯುಗ ಆರಂಭವಾಗಲು ಕಾರಣವಾಯಿತು. ದೊಡ್ಡ ತತ್ವಜ್ಞಾನಿ Schopenhauer (ಶೋಪೆನ್ ಹೋವರ್) 'ಹದಿನೈದನೆಯ ಶತಮಾನದಲ್ಲಿ ಗ್ರೀಕ್ ಸಾಹಿತ್ಯವು ನವೋದಯದ ಮೇಲೆ ಪ್ರಭಾವ ಬೀರಿತ್ತು. ಅದರಂತೆ ಸಂಸ್ಕೃತ ಸಾಹಿತ್ಯವು ನಮ್ಮ ಕಾಲದ ಇಂಗ್ಲಿಷ್ ಸಾಹಿತ್ಯದ ಮೇಲೆ ಪ್ರಭಾವ ಬೀರಿದೆ' ಎಂದಿದ್ದಾರೆ. ಇಂಗ್ಲಿಷ್ ಸಾಹಿತ್ಯದ ದೊಡ್ಡ ಕವಿಗಳಾದ, ರೊಮ್ಯಾಂಟಿಕ್ ಯುಗದ ಮುಂಚೂಣಿಯಲ್ಲಿದ್ದ ಸ್ಯಾಮುಯಲ್ ಟೈಲರ್, ಕೋಲ್ ರಿಜ್, ಬೈರನ್, ಫಿಟ್ಸ್ ಜೆರಲ್ಡ್ ಮ್ಯಾಥ್ಯೂ ಅರ್ನಾಲ್ಡ್, ರುಡ್ ಯಾರ್ಡ್ ಕಿಪ್ಲಿಂಗ್ ಎಮರ್ಸನ್, ಇತ್ಯಾದಿ ಮುಖ್ಯ ಕವಿಗಳ ಮೇಲೆ ಈ ಶಕುಂತಲಾ ಕಾವ್ಯ ಅಪಾರ ಪ್ರಭಾವವನ್ನು ಬೀರಿತು. ವಿಲಿಯಂ ಜೋನ್ಸ್ ಅವರಿಂದ ಇದು ಸಾಧ್ಯವಾಯಿತು ಹಾಗೂ ಇವರಿಂದ ಭಾರತದ ಗೌರವ, ಘನತೆ ಹೆಚ್ಚಾಯಿತು. ಇದರ ಮುನ್ನುಡಿಯಲ್ಲಿ ಜೋನ್ಸ್ ಅವರು 'ಕಾಳಿದಾಸನು ಈ ಕೃತಿಯನ್ನು (ಶಾಕುಂತಲ) ರಚಿಸಿದಾಗ ಬ್ರಿಟಿಷರು ಅನಕ್ಷರಸ್ಥರೂ, ಅಸಂಸ್ಕೃತರೂ ಆಗಿದ್ದರು' ಎಂದು ಬರೆದಿದ್ದಾರೆ. 'ಇದು ಹಿಂದೂಗಳ ಅತ್ಯಂತ ಆಹ್ಲಾದಕರ ಅಧಿಕೃತ ಚಿತ್ರಣ' ಎಂದು ವರ್ಣಿಸಿದ್ದಾರೆ.

ವಿಲಿಯಂ ಜೋನ್ಸ್ ಅವರು ತಮ್ಮ 'ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್' ಸಂಸ್ಥೆಯಿಂದ ಅನೇಕ ಕೃತಿಗಳನ್ನು ಪ್ರಕಟಿಸಿದರು. 1788 ರಲ್ಲಿ 'ಏಷಿಯಾಟಿಕ್ ರಿಸರ್ಚಸ್' ಎಂಬ ಸಂಪುಟವನ್ನು ಹೊರ ತಂದರು. ಅವರೇ ಇದರ ಸಂಪಾದಕರಾಗಿದ್ದು ಭಾರತದ ಭಾಷೆ, ಇತಿಹಾಸ, ಕಲೆ, ವಿಜ್ಞಾನ, ಸಂಗೀತ ಸಾಹಿತ್ಯ ಇತರ ವಿಷಯಗಳ ಕುರಿತು ಲೇಖನಗಳಿದ್ದವು. ಇದರ ಕೆಲಸ ಎಷ್ಟು ಅಗಾಧವಾದುದು ಎಂದರೆ ಇದು ಇಂದಿಗೂ ಕಾರ್ಯನಿರ್ವಹಿಸುತ್ತಿದೆ. ಭಾರತದ ಕುರಿತಾಗಿ ನೂರಾರು ಸಂಪುಟಗಳು ಹೊರ ಬಂದಿವೆ. ಸಾವಿರಾರು ಶೀರ್ಷಿಕೆಗಳ ಲೇಖನಗಳು ಇದರಲ್ಲಿವೆ. ವಿಲಿಯಂ ಜೋನ್ಸ್‌ರು ಆರಂಭಿಸಿದ್ದ ಮಹಾತ್ಕಾರ್ಯ ಇಂದಿಗೂ ಜೀವಂತವಾಗಿದೆ.

ವಿಲಿಯಂ ಜೋನ್ಸ್ ಶಾಕುಂತಲ, ಹಿತೋಪದೇಶ, ಗೀತಗೋವಿಂದ ಇವುಗಳನ್ನು ಮುಖ್ಯವಾಗಿ ಇಂಗ್ಲಿಷ್ ಗೆ ಅನುವಾದ ಮಾಡಿದರು. ಕಾಳಿದಾಸನ ಋತುಸಂಹಾರ ಕೃತಿಯನ್ನು ವಿಮರ್ಶಾತ್ಮಕವಾಗಿ ಸಂಪಾದನೆ ಮಾಡಿದರು. ಇಂಗ್ಲಿಷ್ ನಲ್ಲಿ 'ಎಸ್ಸೇಸ್ ಆನ್ ದಿ ಲಾ ಆಫ್ ಬೇಲ್ ಮೆಂಟ್ಸ್' ಎಂಬ ಕೃತಿ ರಚಿಸಿದರು. ನೂರಾರು ಬಿಡಿ ಲೇಖನಗಳನ್ನು ಬರೆದರು. ಸಂಸ್ಕೃತದ ಮನುಸ್ಮೃತಿಯ ಭಾಷಾಂತರ 'ದಿ ಆರ್ಡಿನೆನ್ಸ್ ಆಫ್ ಮನು' ಅಪೂರ್ಣವಾಯಿತು.

ಇವರ ಆಸಕ್ತಿಯ ಇನ್ನೊಂದು ಮುಖ್ಯ ಕ್ಷೇತ್ರವೆಂದರೆ ಭಾಷಾ ವಿಜ್ಞಾನ. ಇವರಿಗೆ ಭಾರತಕ್ಕೆ ಬರುವಷ್ಟರೊಳಗೆ ಯುರೋಪಿನ ಬಹುತೇಕ ಎಲ್ಲ ಭಾಷೆಗಳ ಜ್ಞಾನವೂ ಇತ್ತು. ಭಾರತಕ್ಕೆ ಬಂದ ಮೇಲೆ ಕಲಿತ ಸಂಸ್ಕೃತವು ಯುರೋಪಿನ ಭಾಷೆಗಳೊಂದಿಗೆ ಸಂಬಂಧ ಹೊಂದಿದೆ ಎಂದು ತಿಳಿದುಕೊಂಡರು. ಸಂಸ್ಕೃತ, ಗ್ರೀಕ್, ಲ್ಯಾಟಿನ್, ಈ ಮೂರು ಭಾಷೆಗಳೂ ಒಂದೇ ಮೂಲದಿಂದ ಬಂದಿವೆ ಎಂಬುದು ಅವರ ಪ್ರಮೇಯವಾಗಿತ್ತು. ಇವುಗಳನ್ನು ಇಂಡೋ–ಯುರೋಪಿನ ಭಾಷೆಗಳು ಎಂದು ಕರೆದರು. ಈ ಶಬ್ದವನ್ನು ಮೊದಲು ಉಪಯೋಗಿಸಿ ಬಳಕೆಗೆ ತಂದವರೇ ವಿಲಿಯಂ ಜೋನ್ಸ್. ನಂತರ ಈ ಕುರಿತು ಅನೇಕ ಅಧ್ಯಯನಗಳಾದವು.

ಇಂಗ್ಲಿಷ್ ಮಾತೃಭಾಷೆಯ ಈ ಮಹನೀಯರು ಸಂಸ್ಕೃತ ಭಾಷೆಯ ಸೌಂದರ್ಯ, ಸುಕುಮಾರತೆ, ರಚನಾ ಶೈಲಿ, ವ್ಯಾಕರಣ ಬಂಧ ಇವುಗಳಿಗೆ ಮಾರು ಹೋಗಿದ್ದರು. ಇದನ್ನು ಬಹುವಾಗಿ ಬಣ್ಣಿಸಿದ್ದಾರೆ. 'ಸಂಸ್ಕೃತವು ಅದ್ಭುತ ರಚನಾ ಶಿಲ್ಪವನ್ನು ಹೊಂದಿದೆ. ಇದು ಇಂಗ್ಲಿಷ್ ಗಿಂತ ಹೆಚ್ಚು ಪರಿಪೂರ್ಣ, ಗ್ರೀಕ್ ಗಿಂತ ಹೆಚ್ಚು ಖಚಿತತೆ, ಲ್ಯಾಟಿನ್ ಗಿಂತ ಹೆಚ್ಚು ಪದ ಸಂಪತ್ತನ್ನು ಹೊಂದಿದೆ ಹಾಗೂ ಈ ಎಲ್ಲ ಭಾಷೆಗಳಿಗಿಂತ ಹೆಚ್ಚು ಸೊಗಸಾದದ್ದೂ, ಆಕರ್ಷಕವಾದದ್ದೂ, ಸಂಸ್ಕಾರಗೊಂಡದ್ದೂ ಆಗಿದೆ ಎಂದು ಹೊಗಳಿದ್ದಾರೆ.

ಭಾರತದ ಬಹುತೇಕ ಮುಖ್ಯ ಸಂಸ್ಕೃತ ಕೃತಿಗಳನ್ನು ಅನುವಾದ ಮಾಡಿದ ಈ ವ್ಯಕ್ತಿಗೆ ಭಾರತದ ಕುರಿತು ಮುಗಿಯದ ಆಸಕ್ತಿ ಇತ್ತು. ಇವರ ಮೆಚ್ಚಿನ ಕ್ಷೇತ್ರಗಳು ಅನೇಕವಿದ್ದರೂ ತಾವು ವೃತ್ತಿಯಾಗಿ ಸ್ವೀಕರಿಸಿದ್ದ ನ್ಯಾಯಾಂಗದ ಕುರಿತು ಮಾಡಬೇಕಾದ ಕೆಲಸ ಬಹಳಷ್ಟಿದೆ ಎಂಬುದು ತಿಳಿದಿತ್ತು. ಈ ಹಿನ್ನೆಲೆಯಲ್ಲಿ ಭಾರತದ ಹಿಂದೂ ಕಾನೂನುಗಳು ಮುಸ್ಲಿಂ ಕಾನೂನುಗಳ ಅಧ್ಯಯನ ಆರಂಭಿಸಿದ್ದರು. ಭಾರತಕ್ಕೆ ಅಗತ್ಯವಿರುವ ಒಂದು ಕಾನೂನು ಪುಸ್ತಕವನ್ನು ರಚಿಸಬೇಕೆಂದಿದ್ದರು. ಆದರೆ ಅದು ನೆರವೇರಲಿಲ್ಲ.

ಇದೆಲ್ಲದರ ಹೊರತಾಗಿ ಇವರ ಕೆಲವು ಸಿದ್ಧಾಂತಗಳು ತಪ್ಪಾಗಿದ್ದವು. ಅವುಗಳು ಕೇವಲ ಹೇಳಿಕೆಗಳಾಗಿ ಉಳಿದವು. ಏಕೆಂದರೆ ಆ ವಿಚಾರಗಳಿಗೆ ಪುರಾವೆಯನ್ನು ಒದಗಿಸಲು ಅವರಿಗೆ ಸಾಧ್ಯವಾಗಲಿಲ್ಲ.

**ಹೇಳಿಕೆಗಳು:** a - ಆರ್ಯರು ಭಾರತಕ್ಕೆ ಮಧ್ಯ ಏಷ್ಯಾದಿಂದ ಬಂದರು. b – ಈಜಿಪ್ಟಿನ ಪುರೋಹಿತರು ಇತಿಹಾಸಪೂರ್ವ ಕಾಲದಲ್ಲಿ ಭಾರತಕ್ಕೆ ಬಂದು ನೆಲೆಸಿದರು. c – ಚೀನೀಯರು ಕ್ಷತ್ರಿಯ ಜಾತಿಗೆ ಸೇರಿದ ಹಿಂದೂಗಳು.

ಇಂತಹ ಕೆಲವು ಹೇಳಿಕೆಗಳು ಪುರಾವೆಗಳಿಲ್ಲದೇ ಬಿದ್ದು ಹೋದವು.

ವಿಲಿಯಂ ಜೋನ್ಸ್ ಒಬ್ಬ ಅದ್ಭುತ ಪ್ರತಿಭಾಶಾಲಿ ಆಗಿದ್ದರು. ತಮ್ಮ ಮೂವತ್ತೇಳನೆಯ ವಯಸ್ಸಿನಲ್ಲಿ ಭಾರತಕ್ಕೆ ಬಂದು ಹನ್ನೊಂದು ವರ್ಷ ಕೆಲಸ ಮಾಡಿ ನಲವತ್ತೇಳನೆಯ ವಯಸ್ಸಿನಲ್ಲಿ ನಿಧನರಾದರು. ಇಷ್ಟು ಕಡಿಮೆ ಅವಧಿಯಲ್ಲಿ ಇಂತಹ ಅಗಾಧ ಕೆಲಸ ಮಾಡಲು ಸಾಧ್ಯವೇ ಎನಿಸುತ್ತದೆ. ಇಂತಹ ಕೆಲಸಗಳಿಗೆ ಶ್ರಮದ ಹೊರತಾಗಿ ಪ್ರತಿಭೆ, ಅಪಾರ ಪ್ರೀತಿ ಇರಬೇಕಾಗುತ್ತದೆ. ಭಾರತದ ಹಾಗೂ ಸಂಸ್ಕೃತ ಭಾಷೆಯ, ಕಾವ್ಯಗಳ ಕುರಿತ ಅವರ ಪ್ರೀತಿ ಅನುಪಮವಾದದ್ದು. ಒಬ್ಬ ವಿಲಿಯಂ ಜೋನ್ಸ್ ಬಂದದ್ದರಿಂದ ಭಾರತದ ಕೀರ್ತಿ ವಿಶ್ವದೆಲ್ಲೆಡೆ ಮೊಳಗಿತ್ತು. ಎಲ್ಲರೂ ಇಂತಹವರೇ ಬಂದಿದ್ದರೆ ಹೇಗಿರುತ್ತಿತ್ತು!!!?

ಕೊನೆಗೆ ಯಕೃತ್ತಿನ ಸಮಸ್ಯೆಯಿಂದಾಗಿ ತಮ್ಮ ನಲವತ್ತೇಳನೆಯ ವಯಸ್ಸಿನಲ್ಲಿ ಕೊಲ್ಕೊತ್ತಾದಲ್ಲಿ ನಿಧನರಾದರು. ಈ 'ಭಾರತ ಶಾಸ್ತ್ರದ ಪಿತಾಮಹ'ನಿಗೆ ಕೊಲ್ಕೊತ್ತಾದ ಸೌತ್ ಪಾರ್ಕ್ ಸ್ಟ್ರೀಟ್ ನಲ್ಲಿ ಸ್ಮಾರಕವನ್ನು ನಿರ್ಮಿಸಿ ಕೃತಜ್ಞತೆ ಸಲ್ಲಿಸಲಾಗಿದೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ಕವಿ ಮನಸು

## ಮಳೆ

ವರ್ಷಧಾರೆ ಸುರಿಯುತಿರಲು
ಹಸಿರಾಯಿತು ಈ ಧರೆಯು
ನೇಸರನ ದರುಶನವು ಅಪರೂಪ
ಮಳೆಯ ನೀರಿನಲಿ ಎಳೆಯರಾಟ

ಉಕ್ಕಿ ಹರಿಯುತ ಸಾಗಿವೆ ನೀರು
ಸಮುದ್ರವ ಸೇರುವ ತವಕದಲಿ
ಹೊರಗಡಿಯಿಡದೆ ದಿನ ಕಳೆದೆ
ಕಿಟಕಿಯಲಿ ಮಳೆಯ ನೀರ ನೋಡುತಲಿ

ಕಾಣುತಿದೆ ನೇರಳೆ ಎಲೆಗಳ ಮರೆಯಲ್ಲಿ
ತೂಗಾಡುತ್ತಿದೆ ಸೀತೆ ದಂಡೆಯು ಮರದಲ್ಲಿ
ತೇಲುತಿದೆ ನೀರಿನಲಿ ಕಾಗದದ ದೋಣಿಯು
ಮಳೆಯಿಂದ ತಂಪಾದಳು ಭೂ ತಾಯಿಯು.

– ಸುವರ್ಣಾ ಭಟ್ಟ.

## ಗುರು ಜ್ಞಾನದ– ಬೆಳಕು

ಜ್ಞಾನವದು ಅಕ್ಷಯವಾಗಿ
ಬೆಳಕದು ಪಸರಿಸುವಂತಾಗಿ
ಕರುಣೆಯದು ಕಡಲಾಗಿ
ಇರಬೇಕು ಗುರುಗಳು

ನಗುವದು ಮುಖದಲಿ
ಶಾಂತವದು ನೋಟದಲಿ
ಸಹನೆಯದು ಮನದಲಿ
ಇರಬೇಕು ಗುರುಗಳು

ಮಕ್ಕಳ ಮನಸ ಗೆದ್ದವರಾಗಿ
ಸಾಧನೆಗೆ ಬೆನ್ನೆಲುಬಾಗಿ
ಸರಿತಪ್ಪುತಿಳಿಸುವರಾಗಿ
ಇರಬೇಕು ಗುರುಗಳು

ನೆಡೆ ನುಡಿ ಒಂದಾಗಿ
ಪ್ರಾಮಾಣಿಕತೆಯಲಿ
ಬದುಕ ರೂಪಿಸುವರಾಗಿ
ಇರಬೇಕು ಗುರುಗಳು

ಮೌಢ್ಯತೆಯ ತೊಲಗಿಸಿ
ವೈಜ್ಞಾನಿಕ ಭಾವ ಬೆಳೆಸಿ
ನಲಿಯುತ್ತ ಕಲಿಸುವಂತೆ
ಇರಬೇಕು ಗುರುಗಳು

– ಜಿ ಆರ್ ಬಸವರಾಜೇಶ್ವರಿ
ಸರ್ಕಾರಿ ಪ್ರೌಢಶಾಲೆ, ಹಗರಿಗಜಾಪುರ

EVENT
Media
Coverage
Call us
94486 33038

# ಅಂಧತ್ವ ಪ್ರಮಾಣ ಇಳಿಕೆಗೆ 12 ಆಶಾಕಿರಣ ದೃಷ್ಟಿ ಕೇಂದ್ರಗಳು

### ನೂತನ ದೃಷ್ಟಿ ಕೇಂದ್ರ ಉದ್ಘಾಟಿಸಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಲ್.ಆರ್.ಶಂಕರನಾಯ್ಕ



**ಹಂಪಿ ಟೈಮ್ಸ್ ಹೊಸಪೇಟೆ**

ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮ ದಡಿಯಲ್ಲಿ ಅಂಧತ್ವ ಪ್ರಮಾಣ ದರವನ್ನು ಇಳಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಆಶಾಕಿರಣ ಕಾರ್ಯಕ್ರಮವನ್ನು ಜಾರಿಗೊಳಿಸಿದೆ. ಜಿಲ್ಲೆಯಲ್ಲಿ ಒಟ್ಟು 12 ದೃಷ್ಟಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರಿಗೆ ಸೇವೆ ಆರಂಭಿಸಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಂಕರ ನಾಯ್ಕ.ಎಲ್.ಆರ್ ತಿಳಿಸಿದ್ದಾರೆ.

ನಗರದ ಸರ್ಕಾರಿ ಸಾರ್ವಜನಿಕ ನೂರು ಹಾಸಿಗೆ ಆಸ್ಪತ್ರೆ ಆವರಣದಲ್ಲಿ ನೂತನ ಆಶಾಕಿರಣ ದೃಷ್ಟಿಕೇಂದ್ರವನ್ನು ಉದ್ಘಾಟಿಸಿ ಅವರು ಗುರುವಾರ ಮಾತನಾಡಿದರು. ಸಾರ್ವಜನಿಕರಲ್ಲಿ ಕಣ್ಣಿನ ಪೊರೆ ಮತ್ತು ವಕ್ರೀಕಾರಕ ದೋಷಗಳಿಂದ ದೃಷ್ಟಿ ಸಮಸ್ಯೆಗಳ ಸಂಭವನ್ನು ಕಡಿಮೆ ಮಾಡಲು ಮತ್ತು ದೃಷ್ಟಿ ಕೇಂದ್ರಗಳಲ್ಲಿ ಕಣ್ಣಿನ ತಪಾಸಣೆ ಮತ್ತು ಆರೋಗ್ಯ ಜಾಗೃತಿ ಕಾರ್ಯಕ್ರಮವನ್ನು ನಡೆಸುವುದು ಇವುಗಳ ಉದ್ದೇಶವಾಗಿದೆ. ಈಗಾಗಲೇ ತಾಲೂಕಿನ ಹೊಸಪೇಟೆ, ಹಗರಿ ಬೊಮ್ಮನಹಳ್ಳಿ, ಹರಪನಹಳ್ಳಿ, ಕೂಡ್ಲಿಗಿ, ಹಡಗಲಿ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಹಾಗೂ ಹಂಪಸಾಗರ, ಇಟಗಿ. ತೆಲಗಿ, ಅರಸೀಕೆರಿ, ಚಿಕ್ಕಜೋಗಿಹಳ್ಳಿ, ಕೊಟ್ಟೂರು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ದೃಷ್ಟಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಶಸ್ತ್ರ ಚಿಕಿತ್ಸೆಗಳು ಮತ್ತು ಇತರೆ ಕಣ್ಣಿನ ಚಿಕಿತ್ಸೆಗಳಿಗೆ ಉಚಿತ ವ್ಯವಸ್ಥೆ ಕಲ್ಪಿಸುವುದು. ಕ್ಷೇತ್ರ ಸಿಬ್ಬಂದಿಗಳಾದ ಆಶಾ ಮತ್ತು ಸಮುದಾಯ ಆರೋಗ್ಯ ಅಧಿಕಾರಿಗಳು ದಿನನಿತ್ಯದ ಚಟುವಟಿಕೆಯಡಿಯಲ್ಲಿ ಮನೆ, ಮನೆ ಭೇಟಿ ನೀಡಿ ಜನರ ಪ್ರಾಥಮಿಕ ತಪಾಸಣೆ ನಡೆಸಿ ಶಂಕಿತ ಪ್ರಕರಣಗಳು ಕಂಡು ಬಂದಲ್ಲಿ ಹೆಚ್ಚಿನ ಕಣ್ಣಿನ ತಪಾಸಣೆಗೆ ಸಮೀಪದ ದೃಷ್ಟಿ ಕೇಂದ್ರಗಳಿಗೆ ಹೋಗಲು ಸಲಹೆ ನೀಡಲಿದ್ದಾರೆ. ದೃಷ್ಟಿ ಕೇಂದ್ರಗಳಲ್ಲಿ ಅಗತ್ಯವಿದ್ದ ಫಲಾನುಭವಿಗಳಿಗೆ ಪರೀಕ್ಷೆ ನಡೆಸಿ ಉಚಿತವಾಗಿ ಕನ್ನಡಕಗಳನ್ನು ನೀಡಲಾಗುತ್ತದೆ. ಹಾಗೂ ಶಸ್ತ್ರಚಿಕಿತ್ಸೆ ಅಗತ್ಯ ಇದ್ದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ನೇತ್ರಾಧಿಕಾರಿಗಳು ಆಶಾಕಿರಣ ದೃಷ್ಟಿ ಕೇಂದ್ರಗಳಿಗೆ ಹಾಜರಾಗುವ ಎಲ್ಲಾ ಫಲಾನುಭವಿಗಳಿಗೆ ವಕ್ರೀಕಾರಕ ದೋಷ ತಪಾಸಣೆಯನ್ನು ನಡೆಸು ತ್ತಾರೆ. ವಕ್ರೀಕಾರಕ ದೋಷವುಳ್ಳ ಫಲಾನುಭ ವಿಯ ಮಾಹಿತಿಯನ್ನು ನೇತ್ರಾಧಿ ಕಾರಿಗಳು ನಮೂದಿ ಸಲಿದ್ದಾರೆ. 2024–25ನೇ ಸಾಲಿನಲ್ಲಿ ಶಾಲಾ ಮಕ್ಕಳಿಗೆ ಒಟ್ಟು 4333 ಕನ್ನಡಕಗಳನ್ನು ಉಚಿತವಾಗಿ ವಿತರಿಸಿದ್ದೇವೆ. ಹಾಗೂ 2024–25ನೇ ಸಾಲಿನಲ್ಲಿ ವಿಜಯನಗರ ಜಿಲ್ಲೆಯಲ್ಲಿ 1580 ಕನ್ನಡಕಗಳನ್ನು ಉಚಿತವಾಗಿ ಫಲಾನುಭವಿಗಳಿಗೆ ವಿತರಿಸಲಾಗಿದೆ. 2025–26ನೇ ಸಾಲಿನಲ್ಲಿ ಸುಮಾರು 10,500 ಜನ ಫಲಾನುಭವಿಗಳನ್ನು ಗುರುತಿಸಿ ಉಚಿತವಾಗಿ ಕನ್ನಡಕಗಳನ್ನು ವಿತರಿಸುವ ಗುರಿ ಹೊಂದಲಾಗಿದೆ ಎಂದರು.

ಈ ವೇಳೆ ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿಗಳು ಡಾ.ಕೆ.ರಾಧಿಕಾ, ಜಿಲ್ಲಾ ಕ್ಷಯರೋಗ ನಿರ್ಮೂಲಾಧಿಕಾರಿಗಳು ಡಾ.ಡಿ.ಭಾಸ್ಕರ್, ಮುಖ್ಯ ವೈದ್ಯಾಧಿಕಾರಿ ಡಾ.ಹರಿಪ್ರಸಾದ್, ನೇತ್ರ ತಜ್ಞರು ಡಾ.ರಾಜಶೇಖರ್, ಡಾ.ರಾಘವೇಂದ್ರ, ಡಾ. ಕೊಟ್ರೇಶ್, ಜಿಲ್ಲಾ ಕುಷ್ಠರೋಗ ಸಲಹೆಗಾರರು ಮತ್ತು ನೇತ್ರಾಧಿಕಾರಿ ನಜಬುನ್ನಿಸಾ ಬೇಗಂ, ವಾಣಿಶ್ರೀ ಹಾಗೂ ಜಿಲ್ಲಾ ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ವೆಂಕಟೇಶ್, ಹನುಮಂತರೆಡ್ಡಿ, ಗಿಡ್ಡ ಗಂಗಪ್ಪ, ಗುಂಡಿ ರಾಘು ಸೇರಿದಂತೆ ಆಸ್ಪತ್ರೆ ಸಿಬ್ಬಂದಿಗಳು ಭಾಗವಹಿಸಿದ್ದರು.

# ಒಂದು ಲಹರಿ : ಮಣ್ಣು



ಮಣ್ಣು ಮಣ್ಣೆಂದೇಕೆ ಮೂದಲಿಸುವಿರಿ ಕಣ್ಣು ಕಾಣದ ಗಾವಿಲರೇ... ಇದೇನಿದು? ಹೆಣ್ಣು ಎನ್ನುವುದ ಬಿಟ್ಟು ಮಣ್ಣು ಅಂತ ತಪ್ಪಾಗಿ ಹೇಳ್ತಾ ಇದ್ದೀರಲ್ಲ ಅನ್ಕೊಂಡ್ರಾ ಇಲ್ಲಾರೀ ನಾನು ನಿಜವಾಗ್ಲೂ ಮಣ್ಣೇ.. ನನ್ಬಗ್ಗೆ ಸ್ವಲ್ಪ ಹೇಳ್ಕೊಬೇಕು ಅನ್ನಿಸ್ತು.ನನ್ನ ಮನಸ್ಸಿನ ಹೊಯ್ದಾಟವನ್ನು ನಿಮ್ಮ ಮುಂದೆ ಹೇಳ್ತಾ ಇದ್ದೀನಿ,ಮಣ್ಣಿಂದ ಕಾಯಾ ಮಣ್ಣಿಂದ ಅಂತ ಹಾಡ್ತೀರಿ, ಆದ್ರೆ ನಿನ್ನ ತಲೇಲೇನಿದೆ ಮಣ್ಣು ಅಂತ ಬಯ್ತೀರಿ. ಮಾತೆತ್ತಿದ್ರೆ ಮಣ್ಣಾಂಗಟ್ಟಿ ಅಂತ ಅಂತೀರಿ...ನಿಜ ಹೇಳ್ರೀ ನನ್ನನ್ನು ಇಷ್ಟು ದೂಷಿಸ್ತೀರಲ್ಲ....ನಾನಿಲ್ದೆ ನೀವು ಬದುಕಲು ಸಾಧ್ಯನಾ... ಮಡಕೆಯ ಮಾಡುವೆಡೆ ಮಣ್ಣೇ ಮೊದಲು ಅಂತ ಹಾಡುವ ಕುಂಬಾರನೂ ನನ್ನನ್ನು ತುಳಿ ತುಳಿದು ನೋಯಿಸ್ತಾನಲ್ಲ ನನ್ನಡಿಯಲ್ಲಿ ಅವನನ್ನು ತುಳಿಯುವ ಕಾಲ ಬಂದೇ ಬರುವುದು ಒಂದು ದಿನ ಅಂತ ಯೋಚನೆನೇ ಮಾಡಲ್ವಲ್ರೀ...

ನನಗೆ ಹತ್ತಾರು ಹೆಸರಿಟ್ಟಿದ್ದೀರಿ....ಕೆಂಪು ಮಣ್ಣು, ಕಪ್ಪು ಮಣ್ಣು, ಜೇಡಿ ಮಣ್ಣು ,ಮೆಕ್ಕಲು ಮಣ್ಣು, ಮರಳು ಮಣ್ಣು ಹಾಗೇ ಹೀಗೇಂತ ....ನೈಸರ್ಗಿಕ ಪ್ರಕ್ರಿಯೆಯಿಂದ ನಾನು ರೂಪುಗೊಳ್ಳಲು ಸಾವಿರಾರು ವರ್ಷ ಬೇಕು.ನಾನಿಲ್ದೇ ಏನೂ ಇಲ್ಲ,ಮುಲ್ತಾನಿ ಮಿಟ್ಟಿ ಅಂತ ಫಳಫಳ ಹೊಳೆಯೋಕೆ ನನ್ನನ್ನು ಮುಖಕ್ಕೆ ಹಚ್ಕೋತೀರಿ, ಸಮುದ್ರ ತೀರಕ್ಕೆ ಬಂದು ಅದೇನೋ ಮಡ್ಬಾತ್ ಅಂತ ಮಾಡ್ಕೋತೀರಿ.ನನ್ನಲ್ಲಿ ಅನೇಕ ಔಷಧೀಯ ಗುಣಗಳನ್ನು ಕಂಡುಕೊಂಡಿದ್ದೀರಿ.ನೋಡ್ರಿ ಕಲ್ ಮೇಲೆ ಮಳೆ ಸುರಿದ್ರೆ ಕೆಳಗೆ ಹೋಗುತ್ತೆ. ಆದ್ರೆ ನಾನು...ಅದನ್ನು ಹೀರಿ ಹಿಡಿದಿಟ್ಟುಕೊಳ್ತೀನಿ,ತೇವಾಂಶವನ್ನು ಕಾಪಾಡ್ತೀನಿ.ಆದ್ರೂ ನಿಮ್ಮ ಅವೈಜ್ಞಾನಿಕ ಕ್ರಿಯೆಗಳಿಂದ ನನ್ನ ಸವೆತಕ್ಕೆ ಕಾರಣ ಆಗ್ತೀರಿ. ನಿಮ್ಗೆ ಆಹಾರ ಬೆಳೆಯೋಕೆ ನಾನು ಬೇಕು,ನನ್ನಲ್ಲಿ ಪೌಷ್ಟಿಕಾಂಶ ಇದ್ದು,ನಾನು ಫಲವತ್ತಾಗಿದ್ದರೆ ತಾನೆ ನೀವು ಎಲ್ಲವನ್ನೂ ಬೆಳೆಯಲು ಸಾಧ್ಯ. ಪ್ರತಿ ಜೀವಸಂಕುಲಕ್ಕೂ ನಾನು ಬೇಕೇ ಬೇಕಲ್ವೇನ್ರಿ ನನ್ನೊಳಗೆ ಏನೇ ಹಾಕಿದರೂ ಅದನ್ನ ನನ್ನಂತೇ ಪರಿವರ್ತಿಸ್ತೀನಿ.ಕೊನೆಗೆ ನಿಮ್ಮನ್ನು ಕೂಡ... ನನಗೂ ನಿಮಗೂ ಅವಿನಾಭಾವ ಸಂಬಂಧ.ಒಕ್ಕೂ ಇಲ್ಲದಿದ್ದರೆ ಮಣ್ಣು ಮುಕ್ಕು ಅಂತೀರಲ್ಲಾ...ನಾನಿಲ್ದೆ ನನ್ನನ್ನು ಮುಕ್ಕದಿದ್ರೆ ಹೂವು, ಹಣ್ಣು, ಯಾವುದೂ ಇಲ್ಲ ತಿಳ್ಕಳಿ. ಒಂದು ಸಣ್ಣ ಸಸಿ ಕೂಡ ಮಣ್ಣಿನಲ್ಲೇ ಉಳಿಯದು ಬೆಳೆದು ಬೇರಿಗೆ ಪಾರಿಜಾತವ ಸುರಿವುದು ಎಂಬ ಸಾಲುಗಳನ್ನು ಕೇಳಿಲ್ಲವೇ? ನಿಮ್ಮ ಜೀವಾಂತ್ಯದಲ್ಲೂ ನಾನೇ ಅಲ್ವೇನ್ರಿ ಕಂಪನಿ ಕೊಡೋದು....? ಮೂರಿಡಿ ನನ್ನನ್ನು ಹಾಕಿನೇ ಋಣ ಕಳ್ಕೋತೀರಿ.ಮಣ್ ಮಾಡಿ ಬಂದ್ವಿ ಅಂತ ನಿಟ್ಟುಸಿರು ಬಿಡ್ತೀರಿ. ಇನ್ನಾದ್ರೂ ನನ್ನ ಮಹತ್ವವನ್ನು ತಿಳೀರಿ ನನ್ನನ್ನು ಉಳಿಸಿರಿ. ಮನುಷ್ಯರಾದ ನೀವೆಷ್ಟು ಕೃತಘ್ನರಪ್ಪಾ ಕೃತಜ್ಞತೆಯೇ ಇಲ್ಲದಂತೆ ವರ್ತಿಸುವಿರಿ!

# ವಿಕಲಚೇತನ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2025–26 ನೇ ಸಾಲಿನಲ್ಲಿ ವಿದ್ಯಾರ್ಥಿ ವೇತನ ಯೋಜನೆಯಡಿ ವಿಕಲಚೇತನ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಪಡೆಯಲು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ತರಗತಿಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿಕಲಚೇತನ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ರಾಮಾಂಜನೇಯ ತಿಳಿಸಿದ್ದಾರೆ.

ಜಿಲ್ಲೆಯ ಎಲ್ಲಾ ತಾಲೂಕಿನ ಶಾಲಾ, ಕಾಲೇಜುಗಳಲ್ಲಿನ ವಿಕಲಚೇತನ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಸಲ್ಲಿಸಲು ವೆಬ್‌ಸೈಟ್ ವಿಳಾಸ https://ssp.postmatric.karnataka.gov.in/homepage.aspx ಹಾಗೂ https://postmatric.karnataka.gov.in/post.sa/signing.asppre/ ನಲ್ಲಿ ಮೆಟ್ರಿಕ್ ಪೂರ್ವ ನೋಂದಣಿ ಮಾಡಿಕೊಂಡು ಅರ್ಜಿಯನ್ನು ಸಲ್ಲಿಸಬ ಹುದಾಗಿದೆ. ಹಾಗೂ https://ssp.postmatric.karnataka.gov.in/postsa/signin.aspx/ ನಲ್ಲಿ ನೋಂದಣಿ ಮಾಡಿಕೊಂಡು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ತಾಲೂಕು ವಿವಿದೊದ್ದೇಶ ಪುನರ್ವಸತಿ ಕಾರ್ಯಕರ್ತರನ್ನು ಹಾಗೂ ಗ್ರಾಮೀಣ ಪುನರ್ವಸತಿ ಯೋಜನೆಯ ಜಿಲ್ಲಾ ಸಂಯೋಜಕರನ್ನು ಸಂಪರ್ಕಿಸಬಹುದಾಗಿದೆ. ವಿಜಯನಗರ ನಾಗರಾಜ.ಡಿ 9901738353, ಹೊಸಪೇಟೆ ರವಿಕುಮಾರ 9945252991, ಹೂವಿನಹಡಗಲಿ ಮಂಜುನಾಥ 9900890403, ಹರಪನಹಳ್ಳಿ ಧನರಾಜ್ 9110246455, ಹಗರಿಬೊಮ್ಮನಹಳ್ಳಿ ಲಕ್ಷ್ಮಣ 9741185924, ಕೊಟ್ಟೂರು ಟಿ.ಲಕ್ಷ್ಮೀ 8296859012 ಹಾಗೂ ಕೂಡ್ಲಿಗಿ ಚೌಡೇಶ್ 9731747832 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಚಿವ ಶಿವರಾಜ ಎಸ್.ತಂಗಡಗಿ ಅವರ ಪ್ರವಾಸ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**

ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್.ತಂಗಡಗಿ ಅವರು ಜುಲೈ 04 ರಂದು ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು. ಅಂದು ವಿಜಯನಗರ ಜಿಲ್ಲೆಯಿಂದ ಬಳ್ಳಾರಿಗೆ ಆಗಮಿಸಿ, ಬೆಳಿಗ್ಗೆ 11.15 ಕ್ಕೆ ನಗರದ ಗಾಂಧಿನಗರ ಬಡಾವಣೆಯ 1 ನೇ ಕ್ರಾಸ್‌ನ ಮಹಿಳಾ ಕಾಲೇಜು ರಸ್ತೆಯ ವಾರ್ಡ್ ನಂ.21ರ ಬ್ಲಾಕ್ ನಂ.17 ರ ಸಿಟಿ ಕಾರ್ಪೋರೇಷನ್‌ನ ಕೆಳಮಹಡಿಯಲ್ಲಿ ಶಶಿಕಿರಣ ಕ್ರೆಡಿಟ್ ಸೌಹರ್ದ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ಬಳ್ಳಾರಿಯ ನೂತನ ಶಾಖೆಯ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಬಳಿಕ ಮಧ್ಯಾಹ್ನ 02 ಗಂಟೆಗೆ ರಸ್ತೆಯ ಮೂಲಕ ಕೊಪ್ಪಳ ಜಿಲ್ಲೆಗೆ ಪ್ರಯಾಣಿಸು ವರು ಎಂದು ಸಚಿವರ ಆಪ್ತ ಕಾರ್ಯದರ್ಶಿಯವರು ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
HAMPI TIMES VIJAYANAGARA
ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ
ಫಲಿತಾಂಶ ಪ್ರಗತಿಗಾಗಿ
ಈ ಬಾರಿ ಫಲಿತಾಂಶ ನಮ್ಮದೆ
ನಮ್ಮೂರ ವಿದ್ಯಾರ್ಥಿ
ನಮ್ಮ ಹೆಮ್ಮೆ
ನಿಮ್ಮೂರಲ್ಲೇ... ಸಂಜೆ ಸಾಮೂಹಿಕ ಓದು
ಶಾಲೆಗೊಂದು 625 ಅಭಿಯಾನಕ್ಕೆ ಕೈಜೋಡಿಸಿ
ವಾರ್ಡ್, ಗ್ರಾಮ ವ್ಯಾಪ್ತಿಯ
ಸಮಾಜ ಸೇವಕರು, ಶಿಕ್ಷಣ ಪ್ರೇಮಿಗಳು,
ಜನಪ್ರತಿನಿಧಿಗಳು, ಮಕ್ಕಳ ಶೈಕ್ಷಣಿಕ ಪ್ರಗತಿಗೆ
ಸಹಕಾರ ನೀಡಿ, ಮಕ್ಕಳ ಭವಿಷ್ಯಕ್ಕೆ ಬೆಳಕಾಗಿ
SCAN to READ HAMPI TIMES E-PAPER
ನಿಮ್ಮ ಸಹಕಾರದ ನಿರೀಕ್ಷೆಯಲ್ಲಿ...
ಹಂಪಿ ಟೈಮ್ಸ್ ಬಳಗ, ವಿಜಯನಗರ
94486 33038

# ಸಾಮರಸ್ಯ ಕಾವ್ಯಗಳು ರಚನೆಯಾಗಲಿ: ಕಾ.ತ.ಚಿಕ್ಕಣ್ಣ

**ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತುತ ಸಮಾಜದಲ್ಲಿ ಕೂಡಿ ಬಾಳುವ ಸಂದೇಶ ನೀಡುವ ಕಾವ್ಯಗಳು ರಚನೆಯಾಗಬೇಕು ಎಂದು ಬೆಂಗಳೂರಿನ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ. ತ. ಚಿಕ್ಕಣ್ಣ ಹೇಳಿದರು.

ಇಲ್ಲಿಯ ವಿಜಯನಗರ ಶ್ರೀ ಕೃಷ್ಣದೇವ ರಾಯ ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಸಭಾಂಗಣದಲ್ಲಿ ಸಂತಕವಿ ಕನಕದಾಸ ಮತ್ತು ತತ್ವಪದಕಾರ ಅಧ್ಯಯನ ಕೇಂದ್ರ, ಬೆಂಗಳೂರು ಹಾಗೂ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಕನ್ನಡ ಅಧ್ಯಯನ ವಿಭಾಗದ ಸಂಯುಕ್ತ ಆಶ್ರಯದಲ್ಲಿ 'ಕನ್ನಡ ಕಾವ್ಯ ಪರಂಪರೆ ಮತ್ತು ಕನಕದಾಸ' ಎರಡು ದಿನಗಳ ವಿಚಾರ ಸಂಕಿರಣವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಕಾವ್ಯ ಪರಂಪರೆಯಲ್ಲಿ ಕನಕದಾಸರನ್ನು ಉನ್ನತ ಸ್ಥಾನದಲ್ಲಿರಿಸಿದ್ದೇವೆ. 15ನೇ ಶತಮಾನದಲ್ಲಿನ ಕನಕದಾಸರ ಕಾವ್ಯ ಹಾಗೂ ತತ್ವಪದಗಳು ಮಾನವಿ ಮೌಲ್ಯಗ ಳಿಂದ ಇಂದಿಗೂ ಪ್ರಸ್ತುತವಾಗಿವೆ. ಸಮಾಜದ ಸಂಕೀರ್ಣ ವ್ಯವಸ್ತೆಯನ್ನು ಬಿಡಿಸಿ ಹೇಳುತ್ತವೆ. ಸಮಾಜದ ಒಳಿತಿಗಾಗಿ ಹಲವಾರು ಕವಿಗಳು ದಾರ್ಶನಿಕರಾಗಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ. ಮುನಿರಾಜು ಮಾತನಾಡಿ, ಕನಕದಾಸರ ಕೀರ್ತನೆಗಳಲ್ಲಿ ಜನರ ಸಾಮಾಜಿಕ ಬದುಕಿನ ವಾಸ್ತವಾಂಶಗಳನ್ನು ಗುರುತಿಸಿದ್ದಾರೆ. ಸಾಮಾಜಿಕ ಬದುಕನ್ನು ತಿದ್ದುತ್ತಾ ಅಂತರಂಗದ ಅರಿವಿನ ಬೆಳಕನ್ನು ಹೊತ್ತಿಸಿದರು. ಕನಕದಾಸರು ತಮ್ಮ ಕಾಲದಲ್ಲಿನ ಸಂಕೀರ್ಣ ವ್ಯವಸ್ಥೆಯನ್ನು ಕಾವ್ಯಗಳ ಮುಖಾಂತರ ತಿಳಿಸಿದ್ದಾರೆ. ವಿದ್ಯಾರ್ಥಿಗಳು ಚರ್ಚಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಜ್ಞಾನವನ್ನು ವೃದ್ಧಿಸಿಕೊಳ್ಳಬಹುದು. ವಿವಿಯಲ್ಲಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿ ಸುವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ. ಜಿ.ಕೆ. ಸಂತೋಷ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿವಿದ ರಾಜ್ಯಗಳಿಂದ ಸಂಶೋಧನಾ ವಿದ್ಯಾರ್ಥಿಗಳು ಸೇರಿದಂತೆ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ನಂತರದಲ್ಲಿ ವಿಚಾರಗೋಷ್ಠಿಗಳು ಜರುಗಿದವು.

ವಿವಿಯ ಪ್ರಭಾರಿ ಕುಲಸಚಿವ ಪ್ರೊ.ಜಿ.ಪಿ.ದಿನೇಶ್, ಕಲಾ ನಿಕಾಯದ ಡೀನರಾದ ಪ್ರೊ.ರಾಬರ್ಟ್ ಜೋಸ್, ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಸದಸ್ಯರಾದ ದಸ್ತಗಿರ ದಿನ್ನಿ, ಡಾ.ಅನುಪಮ.ಎಚ್.ಎಸ್., ಡಾ.ಎಚ್.ಶಶಿಕಲಾ ವೇದಿಕೆ ಮೇಲೆ ಉಪಸ್ಥಿತರಿದ್ದರು. ವಿವಿಯ ಕನ್ನಡ ಅಧ್ಯಯನ ವಿಭಾಗದ ಉಪನ್ಯಾಸಕ ಹಾಗೂ ಕಾರ್ಯಕ್ರಮ ಸಂಯೋಜಕರಾದ ಡಾ. ಶಿವಪ್ರಕಾಶ ಕೆ. ಎಸ್. ನಿರೂಪಿಸಿದರು. ಡಾ. ಶಕೀಲಾ ಕೆ ವಂದಿಸಿದರು. ವಿವಿಧ ವಿಭಾಗಗಳ ಮುಖ್ಯಸ್ಥರು, ಬೋಧಕರು, ಸಂಶೋಧನಾ ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ ಇತರರಿದ್ದರು.

## ಸಾರ್ವಜನಿಕ ಪ್ರಕಟಣೆ

**ಎ.ಮಂಜುನಾಥ ತಂದೆ ಎ ಚಂದ್ರಕಾಂತ ಆಚಾರ್,** ವಯಸ್ಸು: 44 ವರ್ಷ, ವಾಸ: 29ನೇ ವಾರ್ಡ್, ಎಂ.ಜೆ.ನಗರ, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನಂದರೆ, ನಮ್ಮ ಮಾಲೀಕತ್ವದ ಹೆಸರಿನಲ್ಲಿರುವ ಶ್ರೀ ಲಕ್ಷ್ಮೀ ನರಸಿಂಹ ಫೈನಾನ್ಸ್ ಹೊಸಪೇಟೆ ಇದರ ಲೇವಾದೇವಿ ವ್ಯವಹಾರದ ಅವಧಿಯು ದಿನಾಂಕ: 08–02–2027ವರಗೆ ಇರುತ್ತದೆ. ಆದರೆ ಅನಿವಾರ್ಯ ಕಾರಣಗಳಿಂದಾಗಿ ಲೇವಾದೇವಿ ವ್ಯವಹಾರವನ್ನು ಸ್ಥಗಿತಗೊಳಿಸಲಾಗುತ್ತಿದ್ದು, ಲೇವಾದೇವಿ ಪರವಾನಗಿ ರದ್ದುಪಡಿಸಲು Office of the Registrar of Money Lenders Janatha Bazar Building. Station Road, Ballari-583101 ಅಧಿಕಾರಿಗಳಿಗೆ ದಿನಾಂಕ 03.07.2025 ರಂದು ನೋಟರಿ ಎಚ್.ಪಿ.ಕಲ್ಲಂಭಟ್ ಅವರ ಮೂಲಕ ಅಫಡವಿಟ್‌ನ್ನು ಪ್ರಮಾಣೀಕರಿಸಿ ಸಲ್ಲಿಸಿರುತ್ತೇನೆಂದು ಸಾರ್ವಜನಿಕರ ಮಾಹಿತಿಗಾಗಿ ತಿಳಿಸುತ್ತಿದ್ದೇನೆ.

ಹಂಪಿ ಟೈಮ್ಸ್
HAMPI TIMES

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ವಿಶ್ವಾವಸು

**04–07–2025 – ಶುಕ್ರವಾರ**

| | |
|---|---|
| ತಿಥಿ | : ನವಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಚಿತ್ತೆ |
| ಯೋಗ | : ಶಿವೆ |
| ಕರಣ | : ಕೌಳವ |
| ಸೂರ್ಯೋದಯ | : 05:47:06 |
| ಸೂರ್ಯಾಸ್ತ | : 19:15:39 |
| ರಾಹು ಕಾಲ | : 10:50–12:31 |
| ಯಮಘಂಡ ಕಾಲ | : 15:54–17:35 |
| ಗುಳಿಕ ಕಾಲ | : 07:28–09:09 |




# ಮಣ್ಣಿನಲ್ಲಿ ಮೂಡಿದ ವಿಸ್ಮಯ ಲಿಂಗ ಕಾರ್ಮಿಕರಲ್ಲಿ ಹೆಚ್ಚಿದ ಭಕ್ತಿಭಾವ



**■ ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಜರಿಮಲೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಗೆದ್ದಲಗಟ್ಟೆ ಗ್ರಾಮದ ಕಾಮಯ್ಯನಹಟ್ಟಿ ಬಳಿಯ ಭೋವಿ ನಾಗಪ್ಪನ ಗೋಕಟ್ಟೆಯ ಹತ್ತಿರ ನರೇಗಾ ಕಾಮಗಾರಿ ನಡೆಯುತ್ತಿದ್ದಾಗ, ಮಣ್ಣಿನಲ್ಲೇ ವಿಸ್ಮಯ ರೀತಿಯಲ್ಲಿ ಈಶ್ವರ ಲಿಂಗಾಕೃತಿ ಮೂಡಿದ್ದು, ಕೂಲಿ ಕಾರ್ಮಿಕರಲ್ಲಿ ಭಕ್ತಿಭಾವ ಮೂಡಿಸಿತು.

**ಮಣ್ಣಿನಲ್ಲಿ ಮೂಡಿದ ವಿಸ್ಮಯ: ಕಾರ್ಮಿಕರಲ್ಲಿ ಧಾರ್ಮಿಕ ಭಾವನೆ:** ಬುಧವಾರ ಗೆದ್ದಲಗಟ್ಟೆ ಗ್ರಾಮದ ಗೋಕಟ್ಟೆಯಲ್ಲಿ 150ಕ್ಕೂ ಹೆಚ್ಚು ನರೇಗಾ ಕೂಲಿ ಕಾರ್ಮಿಕರು ಹೂಳು ತೆಗೆಯುವ ಕಾರ್ಯದಲ್ಲಿ ನಿರತರಾಗಿದ್ದರು. ಈ ವೇಳೆ, ಮಣ್ಣಿನ ಗುಡ್ಡೆಯೊಂದನ್ನು ಅಗೆಯುತ್ತಿದ್ದಾಗ ಅದು ಅನಿರೀಕ್ಷಿತವಾಗಿ ಲಿಂಗಾಕೃತಿಯಲ್ಲಿ ಗೋಚರಿಸಿದೆ. ಇದನ್ನು ಗಮನಿಸಿದ ಕೆಲವು ಕಾರ್ಮಿಕರು ಉಳಿದವರಿಗೆ ವಿಷಯ ತಿಳಿಸಿದಾಗ, ಎಲ್ಲರೂ ಈ ವಿಸ್ಮಯಕ್ಕೆ ಆಶ್ಚರ್ಯಚಕಿತರಾದರು. ತಕ್ಷಣ ಕಾಮಗಾರಿಯನ್ನು ನಿಲ್ಲಿಸಿ, ಕೈಮುಗಿದು ಬೇಡಿಕೊಂಡರು.

**ಗ್ರಾಮಸ್ಥರಿಂದಲೂ ದರ್ಶನ, ವಿಶೇಷ ಪೂಜೆ:** ಈ ವಿಸ್ಮಯದ ಸುದ್ದಿ ಗ್ರಾಮದ ಜನರಿಗೂ ತಿಳಿದು, ಅವರೂ ಸಹ ತಕ್ಷಣ ಸ್ಥಳಕ್ಕೆ ದೌಡಾಯಿಸಿ ಲಿಂಗಾಕೃತಿಯ ದರ್ಶನ ಪಡೆದರು. ನಂತರ, ಸಂಭ್ರಮದಿಂದ ಹೂವು, ಹಾರ ತರಿಸಿ ಅಲಂಕಾರ ಮಾಡಿ, ಶ್ರದ್ಧಾ ಭಕ್ತಿಯಿಂದ ಪೂಜೆ ಸಲ್ಲಿಸಲಾಯಿತು. ಅಲ್ಲಿಯೇ ನೆರೆದಿದ್ದ ಕಾರ್ಮಿಕರೆಲ್ಲ ಸೇರಿ ಪ್ರಸಾದ ತಯಾರಿಸಿ ಈಶ್ವರ ಲಿಂಗಕ್ಕೆ ನೈವೇದ್ಯ ಅರ್ಪಿಸಿದರು. "ನಮಗೆ ಅರಿಯದೆಯೇ ನೀನು ಮೂಡಿದ್ದು, ನಮಗೂ, ನಮ್ಮ ಕುಟುಂಬಕ್ಕೂ ಹಾಗೂ ಗ್ರಾಮಕ್ಕೂ ಆರೋಗ್ಯ, ಭಾಗ್ಯ ಕರುಣಿಸು. ಈ ಬಾರಿ ಉತ್ತಮ ಮಳೆಯಾಗಿ, ಫಸಲು ಹುಲುಸಾಗಿ ಬೆಳೆಯಲಿ" ಎಂದು ಪ್ರಾರ್ಥಿಸಿ, ಎಲ್ಲರೂ ಒಟ್ಟಾಗಿ ಕುಳಿತು ಪ್ರಸಾದ ಸ್ವೀಕರಿಸಿದ ಅಪರೂಪದ ಘಟನೆ ಜರುಗಿತು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಕೆ. ಹಾಲಸ್ವಾಮಿ, ಗ್ರಾಮ ಕಾಯಕ ಮಿತ್ರ ಜಿ. ಕಮಲಮ್ಮ, ರವಿ, ಮೇಟಿಗಳಾದ ಗಂಗಾಧರ, ರಾಜು, ಶಿವಮೂರ್ತಿ ಸೇರಿದಂತೆ ನೂರಾರು ಕೂಲಿ ಕಾರ್ಮಿಕರು ಉಪಸ್ಥಿತರಿದ್ದರು.

# ಜು.08 ರಂದು ಒಂದು ದಿನದ ಕಾರ್ಯಗಾರ ತರಬೇತಿ

**■ ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಸಹಯೋಗದಲ್ಲಿ ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿ ಹಾಗೂ ಬಾಲನ್ಯಾಯ ಕಾಯ್ದೆ, ಬಾಲ್ಯವಿವಾಹ ನಿಷೇಧ ಕಾಯ್ದೆ, ಪೋಕ್ಸೋ ಕಾಯ್ದೆ ಕುರಿತು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ, ಹಿರಿಯ ಮೇಲ್ವಿಚಾರಕರಿಗೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ಗ್ರಾಮ ಪಂಚಾಯತಿ ಮಹಿಳಾ ಅಧ್ಯಕ್ಷರುಗಳಿಗೆ ಜು.08 ರಂದು ಮಧ್ಯಾಹ್ನ 02 ಗಂಟೆಗೆ ನಗರದ ಜಿಲ್ಲಾ ಪಂಚಾಯತ್‌ನ ನಜೀರ್ ಸಭಾಂಗಣದಲ್ಲಿ ಒಂದು ದಿನದ ಕಾರ್ಯಗಾರ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೈರ್ ಅವರು ತಿಳಿಸಿದ್ದಾರೆ.

# ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ: ಅರ್ಜಿ ಆಹ್ವಾನ

**■ ಹಂಪಿ ಟೈಮ್ಸ್ ಕೊಪ್ಪಳ**

2025–26 ನೇ ಸಾಲಿಗೆ ಅಲ್ಪಸಂಖ್ಯಾತರ ನಿರ್ದೇಶನಾಲಯದ ವತಿಯಿಂದ ಅಲ್ಪಸಂಖ್ಯಾತ ಸಮುದಾಯ (ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಜೈನ್, ಬೌದ್ಧ ಮತ್ತು ಪಾರ್ಸಿ) ಅಭ್ಯರ್ಥಿಗಳಿಗೆ ಯುಪಿಎಸ್‌ಸಿ/ಕೆಎಎಸ್ ಗೆಜೆಟೆಡ್ ಪ್ರೊಬೇಷನ್ ವಸತಿಯುತ ತರಬೇತಿ ಮತ್ತು ಕೆಪಿಎಸ್‌ಸಿ ಗ್ರೂಪ್–ಸಿ ಆರ್‌ಆರ್‌ಬಿ ಮತ್ತು ಎಸ್‌ಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿಯನ್ನು ಪಡೆಯಲು ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರತಿಷ್ಠಿತ ಸಂಸ್ಥೆಗಳ ಮೂಲಕ ತರಬೇತಿ ನೀಡಲಾಗುತ್ತದೆ. ತರಬೇತಿಗೆ ಅರ್ಹ ಅಭ್ಯರ್ಥಿಗಳು ಸೇವಾಸಿಂಧು ವೆಬ್‌ಪೋರ್ಟಲ್ https://sevasindhu.karnataka.gov.in ನಲ್ಲಿ ಆಗಸ್ಟ್ 02 ರೊಳಗೆ ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಅಭ್ಯರ್ಥಿಗಳು ಕರ್ನಾಟಕ ರಾಜ್ಯಕ್ಕೆ ಸೇರಿದವರಾಗಿರಬೇಕು. ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಪದವಿ ಹೊಂದಿರಬೇಕು. ಅಭ್ಯರ್ಥಿಯ ವಯೋಮಿತಿ ಯುಪಿಎಸ್‌ಸಿ/ಕೆಎಎಸ್ ಗೆಜೆಟೆಡ್ ಪ್ರೊಬೇಷನ್ ವಸತಿಯುತ ತರಬೇತಿ ಮತ್ತು ಕೆಪಿಎಸ್‌ಸಿ ಗ್ರೂಪ್–ಸಿ ತರಬೇತಿಗೆ ಕನಿಷ್ಠ 21 ಹಾಗೂ ಗರಿಷ್ಠ 35 ವರ್ಷಗಳು ಮತ್ತು ಆರ್‌ಆರ್‌ಬಿ ಮತ್ತು ಎಸ್‌ಎಸ್‌ಸಿ ತರಬೇತಿಗಳಿಗೆ ಕನಿಷ್ಠ 18 ಹಾಗೂ ಗರಿಷ್ಠ 30 ಮೀರಿರಬಾರದು (ಅರ್ಜಿ ಸಲ್ಲಿಸುವ ಅಂತಿಮ ದಿನಾಂಕದೊಳಗೆ). ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರಿಯಲ್ಲಿರುವ ಅಭ್ಯರ್ಥಿಗಳು ಅರ್ಹರಿರುವುದಿಲ್ಲ. ಹಿಂದಿನ ಸಾಲಿನಲ್ಲಿ ಐಎಎಸ್/ಕೆಎಎಸ್ ತರಬೇತಿ ಪಡೆದ ಅಭ್ಯರ್ಥಿಗಳು ಅರ್ಹರಿರುವುದಿಲ್ಲ.

ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ https://dom.karnataka.gov.in ಹಾಗೂ ಸಹಾಯವಾಣಿ : 8277799990 ಗೆ ಕರೆಮಾಡಿ ಮಾಹಿತಿಯನ್ನು ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕೊಪ್ಪಳ ಜಿಲ್ಲಾ ಅಲ್ಪಸಂಖ್ಯಾತರ ಕಛೇರಿ ಹಾಗೂ ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ಕೊಪ್ಪಳ: 8088894549, ಗಂಗಾವತಿ: 9986244408, ಕುಷ್ಟಗಿ: 8880482486, ಯಲಬುರ್ಗಾ: 8095191406 ಗೆ ಸಂಪರ್ಕಿಸಬಹುದು ಎಂದು ಇಲಾಖೆಯ ಜಿಲ್ಲಾ ಅಧಿಕಾರಿ ಅಜ್ಮೀರ್ ಅಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕರಾಮುವಿ: ಪ್ರವೇಶಾತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ,**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2025–26 ರ ಜುಲೈ ಆವೃತ್ತಿಗೆ ಯುಜಿಸಿ ಅನುಮೋದಿತ ಶಿಕ್ಷಣಕ್ರಮಗಳ ಪ್ರವೇಶಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಬಿ.ಎ., ಬಿ.ಕಾಂ., ಬಿ.ಎಸ್ಸಿ., ಬಿ.ಬಿ.ಎ., ಬಿ.ಸಿ.ಎ., ಬಿ.ಲಿಬ್.ಐ.ಎಸ್ಸಿ., ಬಿ.ಎಸ್.ಡಬ್ಲ್ಯೂ., ಎಂ.ಎ., ಎಂ.ಕಾಂ., ಎಂ.ಎಸ್ಸಿ., ಎಂ.ಬಿ.ಎ., ಎಂ.ಸಿ.ಎ., ಎಂ.ಎಸ್.ಡಬ್ಲ್ಯೂ., ಎಂ.ಲಿಬ್.ಐ.ಎಸ್ಸಿ., ಪಿಜಿ ಸರ್ಟಿಫಿಕೇಟ್, ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಶಿಕ್ಷಣಕ್ರಮಗಳಿಗೆ ಬಳ್ಳಾರಿ ಪ್ರಾದೇಶಿಕ ಕೇಂದ್ರದಲ್ಲಿ ಆನ್‌ಲೈನ್ ಮೂಲಕ ಪ್ರವೇಶಾತಿ ನೀಡಲಾಗುತ್ತಿದೆ.

ವಿಶ್ವ ವಿದ್ಯಾನಿಲಯದ ಅಂತರ್ಜಾಲ www.ksoumysuru.ac.in ನಲ್ಲಿ ಲಭ್ಯವಿರುವ ಪ್ರಾಸ್‌ಪೆಕ್ಟಸ್‌ನಲ್ಲಿ ಎಲ್ಲಾ ವಿವರಗಳನ್ನು ನೀಡಿದ್ದು, ವಿದ್ಯಾರ್ಥಿಗಳು ಅದರನ್ವಯ ಅರ್ಹ ಶಿಕ್ಷಣಕ್ರಮಗಳಿಗೆ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಆನ್‌ಲೈನ್ ಅಡ್ಮಿಷನ್ ಪೋರ್ಟಲ್ ಮೂಲಕ ಪ್ರವೇಶಾತಿ ಮಾಡಿಕೊಳ್ಳಬಹುದಾಗಿದೆ. ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳಿಗೆ, ಡಿಫೆನ್ಸ್/ಎಕ್ಸರ್ವೀಸ್‌ಮನ್ ವಿದ್ಯಾರ್ಥಿಗಳು, ಆಟೋ/ಕ್ಯಾಬ್ ಡ್ರೈರ್ಸ್ ಮತ್ತು ಕೆ.ಎಸ್.ಆರ್.ಟಿ.ಸಿ ನೌಕರರಿಗೆ ಮತ್ತು ಅವರ ಮಕ್ಕಳಿಗೆ ಬೋಧನಾ ಶುಲ್ಕದಲ್ಲಿ ಶೇ.10 ರಷ್ಟು ವಿಶೇಷ ರಿಯಾಯಿತಿ ಇದೆ. ಕೋವಿಡ್‌ನಿಂದಾಗಿ ಮೃತ ಪೋಷಕರ ಮಕ್ಕಳಿಗೆ, ದೃಷ್ಠಿಹೀನ ವಿದ್ಯಾರ್ಥಿಗಳಿಗೆ ಹಾಗೂ ತೃತಿಯ ಲಿಂಗಗಳಿಗೆ ಪೂರ್ಣಶುಲ್ಕ ವಿನಾಯಿತಿ ಇದ್ದು, ಇದರ ಸದುಪಯೋಗ ಪಡೆದುಕೊಳ್ಳಬಹುದು. ಅರ್ಜಿ ಸಲ್ಲಿಸುವಾಗ ತೊಂದರೆಗಳು ಎದುರಾದಲ್ಲಿ ಆನ್–ಲೈನ್ ಸಹಾಯವಾಣಿ 8800335638, 8690544544 ಗೆ ಸಂಪರ್ಕಿಸಬಹುದು. ನಿರ್ದೇಶಕರಾದ ಡಾ.ಹೆಚ್.ಮಲ್ಲಿಕಾರ್ಜುನ ತಿಳಿಸಿದ್ದಾರೆ.

# ಜಿಲ್ಲೆಯ ಜಲಮೂಲಗಳ ಸಂರಕ್ಷಣೆಗೆ ಗಣತಿ ಕಾರ್ಯ ಅಚ್ಚುಕಟ್ಟಾಗಿ ನಿರ್ವಹಿಸಿ

## ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಸೂಚನೆ



**■ ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯಲ್ಲಿರುವ ನೀರಾವರಿ ಪ್ರದೇಶಗಳಲ್ಲಿನ ನೀರಿನಾಸರೆಗಳ ಗಣತಿ ಕಾರ್ಯವನ್ನು ಅಧಿಕಾರಿಗಳು ಅಚ್ಚುಕಟ್ಟಾಗಿ ನಿರ್ವಹಿಸಿ ಸೂಕ್ತ ಅಂಕಿಅಂಶಗಳನ್ನು ನೀಡಬೇಕು ಎಂದು ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸಾಂಖ್ಯಿಕ ವಿಭಾಗ ಮತ್ತು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ನೇತೃತ್ವದಲ್ಲಿ ನಡೆದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಗುರುವಾರ ಮಾತನಾಡಿದರು, ಜಲಸಂಪನ್ಮೂಲ ಇಲಾಖೆಯ ಶೇ.100 ರಷ್ಟು ಕೇಂದ್ರ ಸುರಕ್ಷಿತ ಸಣ್ಣ ನೀರಾವರಿ ಅಂಕಿ–ಅಂಶಗಳ ಸಮನ್ವಯೀಕರಣ ಯೋಜನೆಯಡಿಯಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ ಸಣ್ಣ ನೀರಾವರಿ ಗಣತಿಯನ್ನು ಕೈಗೊಳ್ಳಲಾಗುತ್ತಿದೆ. ಜಿಲ್ಲೆಯಲ್ಲಿರುವ ಎಲ್ಲಾ ಸಣ್ಣ ನೀರಾವರಿ ಹಾಗೂ ನೀರಿನಾಸರೆಗಳ ಗಣತಿಯನ್ನು ಸಮರ್ಪಕವಾಗಿ ಕೈಗೊಳ್ಳಬೇಕು. ಜಿಲ್ಲಾ ಮಟ್ಟದಲ್ಲಿ ಗಣತಿ ಕಾರ್ಯ ಮಾಡುವ ಮೇಲ್ವಿಚಾರಕರಿಗೆ ಮತ್ತು ತಾಲೂಕು ಮಟ್ಟದಲ್ಲಿ ಗಣತಿ ಕಾರ್ಯ ಕೈಗೊಳ್ಳುವ ಕಂದಾಯ ಇಲಾಖೆಯ ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಕಂದಾಯ ನಿರೀಕ್ಷಕರು ಗಣತಿ ಕಾರ್ಯ ವಿಧಾನದ ಕುರಿತು ಸೂಕ್ತ ತರಬೇತಿ ಹೊಂದಬೇಕಿದೆ. ಕಂದಾಯ ಇಲಾಖೆ, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆ, ಕೃಷಿ, ತೋಟಗಾರಿಕೆ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳು ಸೇರಿದಂತೆ ವಿವಿಧ ಇಲಾಖೆಗಳ ಸಮನ್ವಯತೆಯಿಂದ ಗಣತಿ ಕ್ಷೇತ್ರ ಕಾರ್ಯ ಕೈಗೊಳ್ಳಬೇಕು ಎಂದರು.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಪತ್ರಿಬಸಪ್ಪ ಅವರು ಮಾತನಾಡಿ, ಪ್ರಸ್ತುತ 2023–24ನೇ ವರ್ಷವನ್ನು ಆಧರಿಸಿ 7ನೇ ಸಣ್ಣ ನೀರಾವರಿ ಹಾಗೂ 2ನೇ ನೀರಿನಾಸರೆಗಳ ಗಣತಿಯನ್ನು ಡಿಜಿಟಲ್ ಮೋಡ್‌ನೊಂದಿಗೆ ಪ್ರಥಮ ಬಾರಿಗೆ ಮೊಬೈಲ್ ಆಪ್ ಬಳಸಿ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಗಣತಿ ಕಾರ್ಯಕ್ಕೆ ತಾಲೂಕು ಮಟ್ಟದಲ್ಲಿ ಸಂಬಂಧಪಟ್ಟ ಸಿಬ್ಬಂದಿಗೆ ತರಬೇತಿ ಏರ್ಪಡಿಸಲಾಗುವುದು. ಅಂತರ್ಜಲ ಯೋಜನೆಗಳು ಹಾಗೂ ಮೇಲ್ಮೈಜಲ ಯೋಜನೆಗಳು ಎಂದು ವರ್ಗೀಕರಿಸಲಾಗಿದೆ. 40 ಹೆಕ್ಟೇರ್‌ವರೆಗಿನ ಅಚ್ಚುಕಟ್ಟು ಇರುವ ಯೋಜನೆಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿರುತ್ತದೆ. 40 ಹೆಕ್ಟೇರ್‌ಗಳಿಗೆ ಮೇಲಿನ 2 ಸಾವಿರ ಹೆಕ್ಟೇರ್‌ವರೆಗಿನ ಅಚ್ಚುಕಟ್ಟು ಇರುವ ಯೋಜನೆಗಳು ಸಣ್ಣ ನೀರಾವರಿ ಇಲಾಖೆಯ ಅಧೀನದಲ್ಲಿರುತ್ತವೆ. 2 ಸಾವಿರ ಹೆಕ್ಟೇರ್‌ಗಳಿಗೆ ಮೇಲಿನ ಅಚ್ಚುಕಟ್ಟು ಇರುವ ಯೋಜನೆಗಳು ಬೃಹತ್ ನೀರಾವರಿ ಇಲಾಖೆಯ ಅಧೀನದಲ್ಲಿರುತ್ತವೆ. ಅಂತರ್ಜಲ ಯೋಜನೆಗಳನ್ನು 4 ವಿಧಗಳಾಗಿ ಅಗೆದ ಬಾವಿ, ಆಳವಲ್ಲದ ಕೊಳವೆ ಬಾವಿ, ಮಧ್ಯಮ ಆಳದ ಕೊಳವೆ ಬಾವಿ ಮತ್ತು ಆಳದ ಕೊಳವೆ ಬಾವಿಗಳಾಗಿ ವರ್ಗೀಕರಿಸಲಾಗಿದೆ. ಹಾಗೂ ನೀರಿನಾಸರೆಯ ವಿಧಗಳು, ಹೊಂಡಗಳು, ಸರೋವರಗಳು, ಕೆರೆಗಳ, ಜಲಾಶಯಗಳು, ಜಲಸಂರಕ್ಷಣಾ ಯೋಜನೆಗಳಾಗಿವೆ ಎಂದರು.

ಜಿಪಂ ಮುಖ್ಯಯೋಜನಾಧಿಕಾರಿ ಅನ್ನದಾನ ಸ್ವಾಮಿ ಮಾತನಾಡಿ, ಸರ್ಕಾರದ ಯೋಜನೆಗಳನ್ನು ಸರ್ಮಪಕವಾಗಿ ಅನುಷ್ಠಾನಗೊಳಿಸಲು ಅಂಕಿ ಅಂಶಗಳು ಬಹಳ ಮುಖ್ಯ. ಆಯಾ ಇಲಾಖೆಯ ಅಧಿನಿಯಮದಲ್ಲಿರುವ ಕೆರೆಗಳ ಮಾಹಿತಿಯನ್ನು ಆಯಾ ತಾಲೂಕಿನ ತಹಶೀಲ್ದಾರರಿಗೆ ನೀಡಬೇಕು. ಅವರು ಗ್ರಾಮ ಆಡಳಿತಾಧಿಕಾರಿ ಮೊಬೈಲ್‌ನಲ್ಲಿ ಅಳವಡಿಸಲು ಅನುಕೂಲ ಮಾಡುತ್ತಾರೆ. ಜೆಸ್ಕಾಂರವರು ಕೃಷಿಗಳಲ್ಲಿ ನೀರಿನ ಮೀಟರ್ ಬೋರ್ಡ್‌ಗಳು ಎಷ್ಟು ಅಳವಡಿಸಿದ್ದಾರೆ ಎಂದು ಅದರ ಮಾಹಿತಿಯನ್ನು ನೀಡಿದರೆ ಸಣ್ಣ ನೀರಾವರಿ ಹಾಗೂ ನೀರಿನಾಸರೆಗಳ ಗಣತಿ ಕಾರ್ಯವನ್ನು ಬಹಳ ಬೇಗ ಬಗೆಹರಿಸಬಹುದು ಎಂದರು.

ಈ ವೇಳೆ ಜಿಪಂ ಉಪ ಕಾರ್ಯದರ್ಶಿ ತಿಮ್ಮಪ್ಪ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಕಾರ್ಯಪಾಲಕ ಅಭಿಯಂತರರಾದ ಆರ್.ವೆಂಕಟೇಶ್, ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಕೆ.ಎಂ.ರಮೇಶ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

# ಕ್ಷೇತ್ರದ ಶೈಕ್ಷಣಿಕಾಭಿವೃದ್ಧಿಗೆ ಶೀಘ್ರ 35 ಕೋಟಿ ಅನುದಾನ

## ಶಾಸಕ ನೇಮಿರಾಜ ನಾಯ್ಕ ಹೇಳಿಕೆ

## ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗೆ ಭೇಟಿ



**■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಕ್ಷೇತ್ರದಲ್ಲಿ ಶೈಕ್ಷಣಿಕ ಅಭಿವೃದ್ಧಿಗಾಗಿ ಶಾಲೆ ಹಾಗೂ ಹಾಸ್ಟೆಲ್‌ಗಳಲ್ಲಿ ಮೂಲಭೂತ ಸೌಕರ್ಯ ಸೇರಿದಂತೆ ಕೊಠಡಿ ದುರಸ್ಥಿ ಕಾರ್ಯಕ್ಕೆ ಸುಮಾರು 35 ಕೋಟಿ ರೂ. ವೆಚ್ಚದ ಕಾಮಗಾರಿಗೆ ಶೀಘ್ರ ಚಾಲನೆ ನೀಡಲಾಗುವುದು ಎಂದು ಶಾಸಕ ನೇಮಿರಾಜ್ ನಾಯ್ಕ್ ಹೇಳಿದರು.

ಪಟ್ಟಣದ ರಾಮ್ ರಹೀಂ ನಗರದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಿಧ್ಯಾರ್ಥಿ ನಿಲಯದ ಕೊಠಡಿಗಳನ್ನು ಬುಧವಾರ ಪರಿಶೀಲಿಸಿ ಅವರು ಮಾತನಾಡಿದರು, ಪ್ರಸ್ತುತ ವಿದ್ಯಾರ್ಥಿ ನಿಲಯದಲ್ಲಿನ ಕೊಠಡಿಗಳು ಸಂಪೂರ್ಣ ಶಿಥಿಲಗೊಂಡಿದ್ದು ಶೀಘ್ರ ದರುಸ್ಥಿ ಕಾರ್ಯಕ್ಕೆ ಚಾಲನೆ ನೀಡಲಾಗುವುದು. ಕ್ಷೇತ್ರದಲ್ಲಿ ಎಎನ್‌ಎಂ ಕ್ವಾಟ್ರಸ್, ಹಾಸ್ಟೇಲ್, ಶಾಲಾ ಕೊಠಡಿ, ಕಿಟಗಿ, ಬಾಗಿಲು ಸೇರಿದಂತೆ ಸುಣ್ಣ–ಬಣ್ಣ ಹಚ್ಚುವ ಕಾಮಗಾರಿಯನ್ನು ಸುಮಾರು 30 ರಿಂದ 35 ಕೋಟಿ ವೆಚ್ಚದಲ್ಲಿ ಇದೇ ವರ್ಷದಲ್ಲಿ ಪೂರ್ತಿ ಮಾಡಲಾಗುವುದು ಒಟ್ಟಾರೆ ಕ್ಷೇತ್ರದಲ್ಲಿ ಶಿಕ್ಷಣ ಹಾಗೂ ಆರೋಗ್ಯಕ್ಕೆ ಸಂಭಂಧಿಸಿದಂತೆ ಪ್ರತಿಯೊಂದು ಸಮಸ್ಯೆಗಳನ್ನು ಇತ್ಯರ್ಥಗೊಳಿಸಿ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿಸುವುದೇ ನನ್ನ ಗುರಿಯಾಗಿದೆ. ಇನ್ನು ಮಾಲವಿ ಜಲಾಶಯಕ್ಕೆ ಸಂಭಂದಿಸಿದಂತೆ ಕಾಮಗಾರಿ ಚಾಲ್ತಿಯಲ್ಲಿದ್ದು, ರೈತರಿಗೆ ಸಹಕಾರಿಯಾಗುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ಸಂಧರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಆನಂದ ಡೊಳ್ಳಿನ, ಜೆಡಿಎಸ್ ತಾಲೂಕಾಧ್ಯಕ್ಷ ವೈ.ಮಲ್ಲಿಕಾರ್ಜುನ, ಬಾದಾಮಿ ಮೃತ್ಯುಂಜಯ, ಉಲುವತ್ತಿ ವಿಎಸ್‌ಎಸ್‌ಎನ್ ಅಧ್ಯಕ್ಷ ಕನ್ನಿಹಳ್ಳಿ ಚಂದ್ರಶೇಖರ, ಹೋಟೇಲ್ ಸಿದ್ದರಾಜು, ಹನುಮಂತ ಶೆಟ್ರು, ನಿಲಯ ಪಾಲಕರಾದ ಚಂದ್ರಾನಾಯ್ಕ್, ನಾಗರಾಜ, ರಾಘವೇಂದ್ರ ಸೇರಿದಂತೆ ಇನ್ನಿತರರಿದ್ದರು.

# ಕಳಪೆ ರಸ್ತೆ ನಿರ್ಮಿಸಿದ್ರೆ ಗುತ್ತಿಗೆದಾರರ ಲೈಸೆನ್ಸ್ ಬ್ಲಾಕ್ ಲಿಸ್ಟ್‌ಗೆ : ಶಾಸಕ ನೇಮಿರಾಜ್ ನಾಯ್ಕ್

**■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಸಾರ್ವಜನಿಕರ ಸುಗಮ ಸಂಚಾರಕ್ಕೆ 75 ಲಕ್ಷ ಮೊತ್ತದಲ್ಲಿ ನೇತಾಜಿ ರಸ್ತೆಯ ಕಾಮಗಾರಿಗೆ ಭುಮಿಪೂಜೆ ಮಾಡಲಾಗುತ್ತಿದೆ. ರಸ್ತೆ ಕಳಪೆಯಾದಲ್ಲಿ ರಸ್ತೆಯನ್ನು ಕೀಳಿಸಿ ಗುತ್ತಿಗೆದಾರರ ಪರವಾನಿಗೆಯನ್ನು ಬ್ಲಾಕ್ ಲಿಸ್ಟ್‌ಗೆ ಸೇರಿಸುವ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ನೇಮಿರಾಜ್ ನಾಯ್ಕ್ ಹೇಳಿದರು.



ಪಟ್ಟಣದ ಬೈಪಾಸ್ ವೃತ್ತದಿಂದ ಎಸ್‌ಬಿಐ ಬ್ಯಾಂಕ್ ಬಳಿಯ ನೇತಾಜಿ ರಸ್ತೆಯನ್ನು ಡಿಎಂಎಫ್ ಯೋಜನೆಯಡಿಯಲ್ಲಿ 75 ಲಕ್ಷದ ರಸ್ತೆ ಕಾಮಗಾರಿಯ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿ, ರಸ್ತೆಗಳ ವಿಷಯದಲ್ಲಿ ಹಲವಾರು ಬೇಡಿಕೆಗಳು ಇದ್ದು ಶೀಘ್ರದಲ್ಲಿ ರಸ್ತೆಗಳ ಸಮರ್ಪಕ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು, ಸದ್ಯ 75 ಲಕ್ಷದಲ್ಲಿ ಗುಣಮಟ್ಟದ ರಸ್ತೆ ಹಾಗೂ ಚರಂಡಿಯನ್ನು ನಿರ್ಮಿಸಲಾಗುವುದು ಮತ್ತು ರೈಲ್ವೇ ಗೇಟ್‌ನ ಆಚೆಗಿರುವ ರಸ್ತೆಯನ್ನು ಇತ್ತೀಚೆಗೆ ಉದ್ಘಾಟನೆಗೊಂಡ ತೇರು ಬೀದಿ ರಸ್ತೆಯಂತೆ ರೂಪಿಸಿ ಡಿವೈಡರ್ ಸೇರಿದಂತೆ ಫುಟ್ಪಾತ್ ನಿರ್ಮಿಸಲಾಗುವುದು, ಬೈಪಾಸ್ ಬ್ರಿಡ್ಜ್‌ಗೆ ಶೀಘ್ರ ಸುಮಾರು 3 ಕೋಟಿ ವೆಚ್ಚದಲ್ಲಿ ರಸ್ತೆ ಕಾಮಗಾರಿಯನ್ನು ರೂಪಿಸಲಾಗುವುದು ಅಲ್ಪಸ್ವಲ್ಪ ಮೊತ್ತದಲ್ಲಿ ರಸ್ತೆಯನ್ನು ಸರಿಪಡಿಸುವ ಕೆಲಸ ಮಾಡಿದರೆ ಮತ್ತೆ ಅದೇ ರಾಗ ಅದೇ ಹಾಡು ಎಂಬಂತೆ ರಸ್ತೆ ಹಾಳಾಗಬಹುದು ಅದಕ್ಕೆ ಉತ್ತಮ ಗುಣಮಟ್ಟದ ಬೈಪಾಸ್ ರಸ್ತೆ ನಿರ್ಮಾಣಕ್ಕೆ ಕ್ರಮವಹಿಸಲಾಗುವುದು ಎಂದರು.

ಈ ಸಂಧರ್ಭದಲ್ಲಿ ಲೋಕೋಪಯೋಗಿ ಇಲಾಖೆಯ ಎಇಇ ಸತೀಶ ನಾಯ್ಕ್, ಜೆಡಿಎಸ್ ತಾಲೂಕು ಅಧ್ಯಕ್ಷ ವೈ.ಮಲ್ಲಿಕಾರ್ಜುನ, ಬನ್ನಿಗೋಳ ವೆಂಕಣ್ಣ, ಉಲವತ್ತಿಯ ವಿಎಸ್‌ಎಸ್‌ಎನ್ ಅಧ್ಯಕ್ಷ ಕನ್ನಿಹಳ್ಳಿ ಚಂದ್ರಶೇಖರ, ಪುರಸಭೆ ಸದಸ್ಯರಾದ ದೀಪಕ್ ಸಾ ಕಠಾರೆ, ಜನ್ನು ನಾಗರಾಜ, ಬಾದಾಮಿ ಮೃತ್ಯುಂಜಯ, ಹನುಮಂತ ಶಟ್ರು, ವಕೀಲ ಪ್ರಕಾಶ, ಅಂಬಳಿ ರಂವೀಂದ್ರ ಗೌಡ, ರುದ್ರೇಶ, ಈಶಾ ಸೇರಿದಂತೆ ಇನ್ನಿತರರು ಭುಮಿಪೂಜೆಯಲ್ಲಿ ಭಾಗವಹಿಸಿದ್ದರು.